ಕೊರವಂಜಿ

A. ANANTHIAH.

ಸಂಪುಟ ೧೧ | ಜೂನ್ ೧೯೫೨ | ಸಂಚಿಕೆ ೩

"ಅಭಿನಂದನೆ"

ಕೊರವಂಜಿಯು ಹುಟ್ಟಿದಾಗಿನಿಂದಲೂ ಅವಳನ್ನು ಆದರದಿಂದ ಆಡಿಸಿ ಪಾಲಿಸಿದವರಲೊಬ್ಬರಾದ ಶ್ರೀ ಕೆ. ಸಿ. ರೆಡ್ಡಿಯವರು ಇಂದು ಕೇಂದ್ರ ಸಚಿವರಾಗಿ, ಅಧಿಕಾರ ಸ್ವೀಕಾರ ಮಾಡಿರುವುದು ಕೊರವಂಜಿಗೆ ಹೆಮ್ಮೆಯ ವಿಷಯ.

ಕ್ಲಿಷ್ಟಕಾಲಗಳಲ್ಲಿ, ಸಂಧಿಗ್ಧ ಸಮಯಗಳಲ್ಲಿ—ಸಂಕಟಬಂದಾಗ ಆಧಾನ ನಿಧಾನಗಳನ್ನು ತೂಕಮಾಡಿ ನೋಡಲು, ಹಾಸ್ಯಪ್ರವೃತ್ತಿ ಅವಶ್ಯಕ. ಆಭಾಗ್ಯವನ್ನು ಪಡೆದ, ವೃದ್ಧಿಪಡಿಸಿಕೊಂಡ ಮಾನ್ಯ ಶ್ರೀ ಕೆ. ಸಿ. ರೆಡ್ಡಿಯವರು ಕೇಂದ್ರದಲ್ಲಿ ಎದುರು ಬಂದ ಸಮಸ್ಯೆಗಳನ್ನು ಧೈರ್ಯದಿಂದ ಬಿಡಿಸುತ್ತಾರೆಂಬುದು ಸ್ವತಃ ಸಿದ್ಧ. ಜೀವನದ ಯಾವ ಹಾದಿಯಲ್ಲಾದರೂ, ಈ ಹಾಸ್ಯ ಪ್ರವೃತ್ತಿಯು ಪರಿಣಾಮಕಾರಿಯೆನ್ನಲು ಶ್ರೀ ರೆಡ್ಡಿಯವರು ಉತ್ತಮ ಉದಾಹರಣೆಯಾಗುತ್ತಾರೆ.

ಕೊರವಂಜಿ ಕಾಯುವಪರಂಜಿ ದೇವನು ಶ್ರೀಮಾನ್ ಚೆಂಗಲರಾಯರೆಡ್ಡಿಯವರಿಗೆ ಸಕಲ ಸನ್ಮಾನಗಳನ್ನೂ ಆಯುರಾರೋಗ್ಯ ಸಿದ್ಧಿಗಳನ್ನು ದಯಪಾಲಿಸಲಿ, ಅವರಿಂದ ಭಾರತಕ್ಕೂ, ಕನ್ನಡನಾಡಿಗೂ, ಉತ್ತಮ ಸೇವೆ ದೊರೆಯಲಿ ಎಂದು ಮನಸಾರೆ ಪ್ರಾರ್ಥಿಸುತ್ತೇವೆ.

ಕುಹಕಿಡಿಗಳು

ಮನೆಸಿಗದೆ 'ಬೋಟ್ ಹೌಸ'ನಲ್ಲಿ ವಾಸಿಸುತ್ತಿದ್ದ ವೈದ್ಯರಿಗೆ ಸಂಪಾದನೆ ಕಡಿಮೆಯಂತೆ.

—ಹಿತ್ತಲ ಡಾಕ್ಟರು ಮದ್ದೇನು ಕೊಟ್ಟಾರು!

*　　　*　　　*

ನಿವೃತ್ತ ಅನುಭವಸ್ಥ ಅಧಿಕಾರಿಗಳಲ್ಲಿ ಹಲವಾರು ಜನ ಈಗ ಜಾತಕ ನೋಡಿಸುತ್ತಿದ್ದಾರಂತೆ.

*　　　*　　　*

ಷೇಕ್ ಅಬ್ದುಲ್ಲಾರವರು ತಮ್ಮ ವಿಪರೀತಾರ್ಥದ ಹೇಳಿಕೆಗಳನ್ನು ನಿಲ್ಲಿಸುವ ತನಕ ಕಾಶ್ಮೀರ ಸಮಸ್ಯೆ ಪರಿಹಾರವಾಗುವುದಿಲ್ಲ. ಎಂದು ಒಬ್ಬ ರಾಜಕಾರಣಿಗಳು ಹೇಳಿದ್ದಾರೆ.

*　　　*　　　*

ಗುಡಿಗಳ ಒಳಗೆ ಹಣತೆ ದೀಪಗಳೇ ಚೆನ್ನ. ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಬಾರದು ಎಂದು ಒಬ್ಬರ ಅಭಿಪ್ರಾಯ.

—ನ್ಯಾಯವೇ! ಅಲ್ಲಾಗೋ ಅನ್ಯಾಯವೆಲ್ಲಾ ವಿದ್ಯುಚ್ಛಕ್ತಿಯ ಬೆಳಕಿನಲ್ಲಿ ಬಯಲಾಗುತ್ತಲ್ಲವೇ?

*　　　*　　　*

"ವಿದ್ಯಾಭಾಸದಲ್ಲಿ ನೂತನ ಮಾರ್ಪಾಡುಗಳು." (ಮುದ್ರಾ ರಾಕ್ಷಸನ ಹೇಳಿಕೆ)

—ನೂತನ ಮಾರ್ಪಾಡುಗಳು ಆಭಾಸ ಎನ್ನುವುದು ಮುದ್ರಾ ರಾಕ್ಷಸನ ಹಾವಳಿ ಮಾತ್ರವೇ?

*　　　*　　　*

ಸಿಂಹಳ ದ್ವೀಪದಲ್ಲಿ ತಿರುಗಿ ರಾಮರಾವಣರ ಕಾಳಗ ನಡೆಯುತ್ತಿದೆ. ಎಂದು ಒಬ್ಬರು ಬರೆದಿದ್ದಾರೆ.

*　　　*　　　*

"ಯಾರಿಗೂ ಪರಿಹಾರಕೊಡದೆ ಎಲ್ಲವನ್ನೂ ರಾಷ್ಟ್ರೀಕರಣ ಮಾಡಲೇಬೇಕು" (ಶ್ರೀ ಗೋಪಾಲನ್)

—ಬೇಗ ನಮ್ಮ ಡಬ್ಬದಲ್ಲಿನ ಸಿಗರೇಟೆಲ್ಲವನ್ನು ನಾವೇ ಸೇದಿಬಿಡೋದು ಒಳ್ಳೆಯದು. ಮುಂದೆ ಹೇಗೋ?

ಉರಿಗಾಳು

—o—

ಮೇಲುಕೋಟೆ ಪೌರಸಭೆಯ ಮೊದಲನೆಯ ಅಧಿವೇಶನದಲ್ಲಿ, ಪೌರಸಭೆಗೆ ಉಪಾಧ್ಯಕ್ಷರನ್ನು ಆರಿಸುವುದು ಅನಾವಶ್ಯಕವೆಂದು ತೀರ್ಮಾನಿಸಲಾಯಿತು (ಸುದ್ದಿ)

*   *   *

ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ೧೭ನೇ ವಯಸ್ಸಿನಲ್ಲೇ, ವಿದ್ಯಾರ್ಥಿಯಾಗಿದ್ದಾಗಲೇ, ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದ್ದರು, (ಪತ್ರಿಕೆ) ನಮ್ಮ ಮಕ್ಕಳು ೫, ೬ನೇ ವಯಸ್ಸಿನಲ್ಲೇ, ಸ್ನಾನದ ಮನೆಯಲ್ಲೇ ಅಸಹಕಾರ ಚಳುವಳಿಯನ್ನು ಪ್ರಾರಂಭಿಸುತ್ತಿವೆ.

*   *   *

ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡುವುದು ಧರ್ಮವಿರುದ್ಧ, ಎಂದು ಈಜಿಪ್ತಿನ ಮುಫ್ತಿ ಅಭಿಪ್ರಾಯಪಟ್ಟಿದಾರೆ....ಅಂದರೆ, ಸ್ತ್ರೀಯರು ಪಡೆದು ಬಂದಿರಬೇಕು, ಎಂಬುದೇ ಅದರ ತತ್ವ.

*   *   *

“ಎಲ್ಲಿದ್ದರೂ, ನೈಜಾಮರಿಗೆ ಹೈದ್ರಾಬಾದ್ ಬಾವಿ ನೀರೇ ಬೇಕು”....ಉಳಿದ ಕಡೆ, ಅವರ ಬೇಳೇಕಾಳು ಬೇಯುವುದಿಲ್ಲವೆಂದು ತೋರುತ್ತೆ.

*   *   *

“ಅಸೆಂಬ್ಲಿಗಳೊಳಗೆ ನಾವು ಕಮ್ಯೂನಿಸ್ಟ್ ಪಕ್ಷದೊಂದಿಗೆ ಸೇರುವೆವು, ಹೊರಗಡೆ ಸೇರುವುದಿಲ್ಲ” (ಕೃಪಲಾನಿ) ಒಳಗಡೆ, ರಕ್ಷೆ ಇದೆ; ಹೊರಗಡೆ, ದೂರ ಇರುವುದೇ ಮೇಲು.

*   *   *

ಹೋಟಲು ಊಟದ ಅಕ್ಕಿ ಪ್ರಮಾಣವನ್ನು ಶೇ. ಅರ್ಧದಷ್ಟು ಕಡಿಮೆ ಮಾಡಬೇಕೆಂದು ಸರ್ಕಾರ ಆಜ್ಞೆಯಿತ್ತಿದೆ....ಹಾಗಾದರೆ, ಮುಕ್ಕಾಲು ಭಾಗ ಕಲ್ಲು, ಮಣ್ಣು, ಇನ್ನು.

*   *   *

ಹತ್ತಿ ಮತ್ತು ಗೋಧಿ ಬೆಳೆಗಳಿಗೆ ಶೇಕಡ ಎರಡರಿಂದ ಐದರಷ್ಟು ನಷ್ಟವನ್ನುಂಟುಮಾಡುವ ಕೋತಿಗಳನ್ನು ಕೊಲ್ಲುವವರಿಗೆ ಮಧ್ಯಪ್ರದೇಶ ಸರಕಾರ ಬಹುಮಾನ ಕೊಡುತ್ತಿದೆ....ಶೇಕಡ ಎರಡರಷ್ಟು ಮಾತ್ರ ಹಾಳುಮಾಡುವ ದಡ್ಡ ಕೋತಿಗಳು, ವಾನರ ಕುಲಕ್ಕೇ ಕಳಂಕ.

*   *   *

“ನಿಮಗೆ ನೂರಾರು ಕಣ್ಣುಗಳಿರಲಿ ಎಂಬುದೇ ನನ್ನ ಹಾರೈಕೆ” ಎಂದು ಬಿಕನೀರ್ ಮಹಾರಾಜರು ಅಧ್ಯಕ್ಷ ವಲಮಂಕರನ್ನುದ್ದೇಶಿಸಿ ಅಪ್ಪಣೆ ಕೊಡಿಸಿದರು....

ಅಂದರೆ, ಅಧ್ಯಕ್ಷ ಪದವಿಯೂ ಇಂದ್ರ ಪದವಿಯೂ ಒಂದೇ ಆಗಲಿ ಎಂಬರ್ಥವಿರ ಬೇಕು.

*　　　　*　　　　*

"ಅಸೆಂಬ್ಲಿಯಲ್ಲಿ ಈ ಸಾರಿ, ಎಂಟು ವಾಕ್ ಔಟ್‌ಗಳು, ಜರುಗಿದುವು" (ಸುದ್ದಿ) ಹಾಗಾದರೆ, ನಮ್ಮ ಪ್ರತಿನಿಧಿಗಳು ಅಲ್ಲಿ ಸುಮ್ಮನೆ ಕೂತಿಲ್ಲ, ಅಂದ ಹಾಗಾಯಿತು.

*　　　　*　　　　*

"ರೇಷನ್ ಡಿಪೋವಿಗೆ ಸಚಿವರ ಭೇಟಿ" (ಸುದ್ದಿ) ನಮ್ಮ ಹಾಗೆ, ನಾಲ್ಕುಗಂಟೆ ಕ್ಯೂ ನಿಂತಿದ್ದರೋ, ಎಂಬುದನ್ನೂ ತಿಳಿಸಿದ್ದರೆ, ಚೆನ್ನಾಗಿತ್ತು.

*　　　　*　　　　*

ಅಖಿಲ ಮದ್ರಾಸ್ ಕುಸ್ತಿಟೂರ್ನಮೆಂಟು, ತೂಕದಪ್ರಕಾರ, ನಾಲ್ಕು ಗ್ರೇಡು ಗಳಲ್ಲಿ ನಡೆಯುತ್ತವೆ....ಮೊದಲನೆಯ ಗ್ರೇಡಿನಲ್ಲಿ "ಸಿ. ಆರ್—ಪ್ರಕಾಶಂ" ಇದ್ದೇ ಇರುತ್ತದೆ, ಎಂದು ಹೇಳಬೇಕಾಗಿಯೇ ಇಲ್ಲ.

*　　　　*　　　　*

"ಹೊಲಿಗೆಯೇ ಇಲ್ಲದ ನಮ್ಮ ಪ್ಲಾಸ್ಟಿಕ್ ಮನಿಪರ್ಸುಗಳು....ನೂರಾರು ಆಗಲೇ ಬಿಕರಿಯಾಗಿವೆ" (ಜಾಹಿರಾತು) ಕಿಸೆ ಹರಕರಿಗೆ ಇದು ಸಂತೋಷದ ಸುದ್ದಿ.

*　　　　*　　　　*

ಕನ್ನಡ ಭಾಷೆಯ ಸರ್ವತೋಮುಖ ಬೆಳೆವಣಿಗೆಗೆ ಸಾಧ್ಯಕಂಥ ಸರ್ವ ಸಹಾ ಯಗಳನ್ನೂ ನೀಡಲು ನಾನು ಸಿದ್ಧನಾಗಿದೇನೆ (ಮುಖ್ಯಮಂತ್ರಿ) ಹಿಂದೆ, ಕನ್ನಡ ದೇಶದ ಅಳರಸರು ತಮ್ಮ "ಭಾಷೆಗೆ ತಪ್ಪುವ ರಾಯರ ಗಂಡನ್" ಎಂಬ ಬಿರುದನ್ನು ಹೊತ್ತು ಮೆರೆಯುತ್ತಿದ್ದರು.

*　　　　*　　　　*

ಅಕ್ಕಿಯನ್ನು ಬಳಸುವ ಅಭ್ಯಾಸ ತಪ್ಪಿಸಲು ಆದರ ಬೆಲೆಯನ್ನೇರಿಸಿರುವುದೂ ಒಂದು ಉತ್ತಮ ಉಪಾಯ (ವರದಿ) ಇದರ ವಿರುದ್ಧ ಚಳುವಳಿಹೂಡಿ ಕೂಗೆಬ್ಬಿಸುವ ಉತ್ಸಾಹವೂ, ಇದರಿಂದ, ಕಡಮೆಯಾಗುವುದು.

*　　　　*　　　　*

ಹೆಲ್‌ಸಿಂಕಿಯಲ್ಲಿ ಮೈಸೂರಿನ ಫುಟ್‌ಬಾಲ್ ಆಟಗಾರರನ್ನು ಕಿಕ್ಕಿರಿದ ಜನ ಸ್ತೋಮನೋಡಿ ಮೆಚ್ಚುತ್ತಾರೆ....ಹೌದು; ಆದರೆ, ಆಟಗಾರರೂ ಕಿಕ್ಕಿ, ಇರಿಯ ಬೇಕಾಗುತ್ತದೆ.

*　　　　*　　　　*

ಕಾಂಗ್ರೆಸ್ ಪಾರ್ಟಿಗೆ ಸಂಘಟಿತ ವಿರೋಧಪಕ್ಷ ಅತ್ಯಗತ್ಯ....ಅದನ್ನು ಕಾಂಗ್ರೆಸಿ ಗರೇ ಒದಗಿಸಬಲ್ಲರು.

ಕೊರವಾವಲೋಕನ

—o—

ಬಂಗಾಳಾಕೊಲ್ಲಿಯಲ್ಲಿ ಸುಂಟರಗಾಳಿ ಬೀಸಿದರೆ ಬೆಂಗಳೂರಿನಲ್ಲಿ ಬೇಸಿಗೆಕಾಲ ದಲ್ಲಿ ಜನ ಕಟಕಟ ಅಂತ ಹಲ್ಲು ಜಗಿದರು, ಅಷ್ಟು ಚಳಿ ಶುರುವಾಗಿತ್ತು. ಕ್ಲಬ್ಬಿಗೆ ಬಂದವರಲ್ಲಿ ಅರ್ಧಜನ ಉಣ್ಣೆಯ ಸ್ವೆಟರ್ ಧರಿಸಿ, ಭಾರವಾದ ಅಂಗಿಗಳನ್ನು ಹಾಕಿ ಕೊಂಡು ಗಡಗಡ ಅಂತ ನಡುಗುತ್ತಿದ್ದರು "ಛಳಿ ಛಳಿ ಛಳಿ ಎಂದಡಿಗಡಿಗ್ಯಾರುವಿ, ಬಿಸಿ ಮಾಡುವ ಬಗೆ ಬೇರುಂಟು" ಎಂದು ಪುರಂದರದಾಸರು ಹೇಳಬಹುದಾದ ಹಾಡನ್ನು ಹಾಡುತ್ತಾ ಕಾರ್ಯರೂಪಗೊಳಿಸುತ್ತಿದ್ದರು.

ತೆಳಿ ರೇಷ್ಮೆ ಷರ್ಟು, ಒಂದು ಅಂಗವಸ್ತ್ರ ಧರಿಸಿದ ಕೊರವ ಕ್ಲಬ್ಬಿಗೆ ಸಾಯಂಕಾಲ ಬಂದ. ಕಿವಿಯಿಂದ ಕಿವಿತನಕ ಅವನ ಬಾಯಿ ನಗುತ್ತಿತ್ತು. ಹಲ್ಲಿನ ಸಾಲೆಲ್ಲಾ ಹುಳಿ ದಾಳಿಂಬೆ ಬೀಜಗಳಂತೆ ಶೋಭಾಯಮಾನವಾಗಿ ಕಾಣಿಸುತ್ತಿತ್ತು. ನನಗೋ ಅಚ್ಚರಿ!

"ಎಲಾ! ಮಗನೆ ಈ ಛಳೀಲಿ, ಇವ ಮೈಕಾಣೋ ಬಟ್ಟೇ ಹಾಕಿಕೊಂಡು ನಗುತಾ ಇದ್ದಾನಲ್ಲಾ! ಇದರ ಮರ್ಮ ಏನಿರಬಹುದು"

ಎಂದು ಯೋಚಿಸುತ್ತಿದ್ದೆ.

ನನ್ನ ಯೋಚನೆಗಳು ಹಣೆಯಮೇಲೆ ಸಾಲುಸಾಲಾಗಿ ನೆರಿಕಟ್ಟಿ ನಿಲ್ಲುವ ಅಭ್ಯಾಸ—ನಲವತ್ತಾದ ಮೇಲೆ.

ಕೊರವ ಇದನ್ನು ಕಂಡು, ನಾನು ಪ್ರಶ್ನಿಸುವಮೊದಲೇ ಹೇಳಿದ.

"ಈ ದಿನ ಆಹಾರ ಸಚಿವರು ನಮ್ಮೂರಿನಲ್ಲಿ ಭಾಷಣ ಮಾಡಿದರು. ಆಹಾರ ಉತ್ಪನ್ನ ಹೆಚ್ಚಾಗಬೇಕು. ಅದಕ್ಕೆ ಮಳೆ ಬೀಳಬೇಕು. ಅದಕ್ಕೆ ನಮ್ಮ ವನ ಸಂಪತ್ತು ಹೆಚ್ಚಾಗಬೇಕು. "ಇಷ್ಟು ಜನ ಇಲ್ಲಿ ಇದ್ದೀರಿ, ವನ ಸಂಪತ್ತಿನ ವೃದ್ಧಿಗೆ ಯಾರು ಏನು ಸಹಾಯ ಮಾಡಿದ್ದೀರಿ" ಎಂದು ಸವಾಲು ಹಾಕಿದರು.

ಆಗ ನಾನು ಹಿಂದಿನಿಂದ ಗಟ್ಟಿಯಾಗಿ ಕೂಗಿದೆ. "ಒಮ್ಮೆ ಕಾಡಿನಲ್ಲಿ ಹಳೇ ತೇಗದಮರಕ್ಕೆ ಹಿಡಿದಿದ್ದ ಗೆಜ್ಜಲನ್ನು ಕೊಡವಿದ್ದೆ" ಅಂತ.

ಸಚಿವರು—'ನೀನಾಮರೂಪಮುನಕು' ಹಾಡಿಬಿಟ್ಟು ಸುಸ್ತಾಗಿ ಹಿಂತಿರುಗಿದರು. ಅದಕ್ಕೇ ಇಷ್ಟು ಖುಷಿ ಎಂದ. ಕೊರವನ ನಗುಮಾತು ಯಾರಿಗೆ ಅರ್ಥ??

ಅವತ್ತು ಗೇರುಪೊಪ್ಪನ್ನು ಬಲು ಚೆನ್ನಾಗಿ ಒಳ್ಳೆ ಹಸುವಿನ ಒಳ್ಳೆ ತುಪ್ಪದಲ್ಲಿ ಹುರಿದು ಹದವಾಗಿ ಉಪ್ಪು ಖಾರ ಕೈಯಾಡಿಸಿ, ಅಂದವಾದ ತಟ್ಟೆಯಲ್ಲಿ ತಂದಿಟ್ಟ ಕ್ಲಬ್ಬಿನಲ್ಲಿ. ಮೂರು ಮಾತುಗಳಿಗೆ ಎರಡು ಪೊಪ್ಪು ಈರೀತಿಯಲ್ಲಿ ಕೂತಿದ್ದವರೆಲ್ಲರೂ ಮೂರು ಮೂರು ತಟ್ಟೆ ಮುಗಿಸಿದ್ದರು. ಹತ್ತೇ ನಿಮಿಷದಲ್ಲಿ. ವಾಚಾಳಿಗಳು ಇವರು ಎನ್ನುವುದಕ್ಕೆ ಬೇರೆ ನಿದರ್ಶನ ಬೇಕೆ?

ರಾಮರಾಯ ಹೇಳಿದ. “ ಪಂಡಿತ ನೆಹ್ರೂ ದಿಟವಾಗಿಯೂ ವಿಶಾಲ ದೃಷ್ಟಿಯವ. ಅದಕ್ಕೇ ಆತ ಕೇಂದ್ರ ಮಂತ್ರಿಮಂಡಲ ರಚಿಸಿದಾಗ ಇಡೀ ಭಾರತಕ್ಕೆಲ್ಲಾ ಪ್ರಾತಿನಿಧ್ಯ ದೊರಕುವಹಾಗೆ ಏರ್ಪಾಡುಮಾಡಿದ್ದಾನೆ.”

ಭೀಮರಾಯ ಅಂದ. “ಹಾಗಲ್ಲಾ ! ಅವ ದಿಟವಾದ ಕಾಂಗ್ರೆಸ್ ಅಧ್ಯಕ್ಷ. ಅದಕ್ಕಾಗಿಯೇ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳು ಹೇಳಿದ ಹಾಗೆ ಈ ಸಾರಿ ‘ ಬಿ ’ ಭಾಗದ ಸಂಸ್ಥಾನಗಳಿಗೆ ಪ್ರಾತಿನಿಧ್ಯ ಕೊಟ್ಟಿದ್ದಾನೆ.”

ರಾಮರಾಯ ಪಲುಕಿದ. “ಅದರ ಮರ್ಮವೇ ಬೇರೆ. ಭಾಷಾವಾರು ಪ್ರಾತಿನಿಧ್ಯ ದೊರಿಕಿಸಲು, ಕನ್ನಡಿಗ, ತಮಿಳಿಗ, ತೆಲುಗಿನವ, ಪಂಜಾಬಿ, ಹಿಂದಿ, ಬಂಗಾಳಿ ಹೀಗೆ ಸಚಿವ ಮಂಡಳ ರಚಿಸಿದ್ದಾನೆ” ಅಂತ.

ಕಾಮನಾಥನ ಬಾಯಿ ಕೆಟ್ಟಿದ್ದು. ಅವನಂದೇ ಬಿಟ್ಟ ‘ ಅಷ್ಟೆಲ್ಲಾ ಯೋಚನೆ ಮಾಡಲು ನೆಹ್ರುಜೀಗೆ ವ್ಯವಧಾನವೆಲ್ಲಿ? ನಲವತ್ತು ಹೆಸರು ತೆಗೆದುಕೊಂಡು ಬಾ ಅಂತ ಆಪ್ತ ಕಾರ್ಯದರ್ಶಿಗೆ ಹೇಳಿದ. ಶ್ರೀಮತಿ ಇಂದಿರಾ ಮಗುವಿನ ಕೈಲಿ ಹದಿನೈದು ಎತ್ತಿಸಿದ. ಅದೇ ಹೆಸರುಗಳೇ ಮಂತ್ರಿ ಮಂಡಲದಲ್ಲಿ ಮೊರೆಯುತ್ತಿವೆ, ಅದಕ್ಕಾಗಿ ನೆಹ್ರುಜಿಯವರನ್ನೂ ಅಭಿನಂದಿಸೋದು ಅಷ್ಟು ಪ್ರಶಸ್ತವಲ್ಲಾ ! ಹದಿನೈದು ಹೆಸರನ್ನೇ ನಲವತ್ತು ಚೀಟೀಲಿಬರೆದು ಬಿಟ್ಟ ಆ ಅಪ್ತಕಾರ್ಯದರ್ಶಿಗೆ ಭಾರತವೇ ಋಣಿ” ಎಂದ.

ಆಗಲೇ ಕೊರವ ಗುಡಿಗುಡಿಸಿದ್ದು. “ಗೇರು ಪೊಪ್ಪು ಬಲು ಪಿತ್ತಕಾರಿ. ಆಡು ಸೊಪ್ಪುತಿಂದಂತೆ ದನ ಮೇದಹಾಗೆ ನೀವು ಅದನ್ನು ತಿಂದಿದ್ದೀರಿ ಅದಕ್ಕೇ ಈ ಹುಚ್ಚಾಪಟ್ಟೆ ಮಾತಾಡುತ್ತಿದ್ದೀರಿ. ನನಗೆ ಗೇರು ಪೊಪ್ಪು ವರ್ಜ ಅದಕ್ಕೇ ದಿಟವಾದ ಸಂಗತಿ ಹೇಳ್ತೀನಿ. ನೀವ್ಯಾರೂ ನಂಬುಲ್ಲ ಆದರೂ ಹೇಳ್ತೀನಿ ನೆಹ್ರೂ ಪರಿಚಿತರಲ್ಲಿ ಪ್ರಭಾವ ಶಾಲಿಗಳು, ಕೆಲಸಗಾರರು ಎಂತ ಯಾರ್ಯಾರು ಕಂಡುಬಂದರೊ ಅಂತಹವರನ್ನು ಪಂಡಿತಜೀ ಕೇಂದ್ರ ಸಚಿವ ಮಂಡಲಕ್ಕೆ ಸೇರಿಸಿಕೊಂಡಿದ್ದಾರೆ” ಎಂದ.

ಆಗಲೇ ರಾಮರಾಯ ಧೈರ್ಯಮಾಡಿ ಅಂದೇಬಿಟ್ಟ ಹಾಗಲ್ಲಾ! ಕೊರವ! ನೆಹ್ರುಜೀ ಸಚಿವಮಂಡಲ ನಿರ್ಮಿಸಿದ್ದು ನಿನ್ನ ಸಲಹೆ ಮೇರೆಗೆ ಅಂತ ನನಗೆ ಗೊತ್ತು’ ಅಂತ.

ಕೊರವ ಯಾಕೋ ಏನೋ ಮರುಮಾತಾಡಲಿಲ್ಲ.

* * *

ಅವತ್ತು ಬಕ್ರೀದ್ ಹಬ್ಬ. ನನಗೂ ಕಛೇರಿಗೆ ರಜಾ. ಮುಸಲ್ಮಾನ್ ಸ್ನೇಹಿತನ ಮನೆಯಲ್ಲಿ ಉಂಡು, ಜೀರ್ಣಿಸಿಕೊಳ್ಳಲು ಅಡ್ಡಾಡಲಿಕ್ಕೆ ಅಂತ ಕ್ಲಬ್ಬಿಗೆ ಹೋದೆ. ನಡೆದು ಸುಸ್ತಾಗಿದ್ದರಿಂದ ಆರಾಮು ಕುರ್ಚಿಯಲ್ಲಿ ಬಿದ್ದಿದ್ದೆ.

“ಕುರಿಗಳು! ಶುದ್ಧ ಕುರಿಗಳು!” ಅಂತ ಹೇಳುತ್ತಾ ಕೊರವ ಒಳಕ್ಕೆ ಬಂದ.

‘ಎಲಾ! ಇವನ! ನಾನು ತಿಂದಿದ್ದು ಇವನಿಗ್ಹೇಗೆ ಗೊತ್ತಾಯ್ತು ಮತ್ಸ ಬ್ರಾಹ್ಮಣರಿಗೆ ಇದ್ದಹಾಗೆ ಬಕ್ರಾ ಬ್ರಾಹ್ಮಣರಿಗೂ ಒಂದು ಕಳೆ ಇರುತ್ತ್ಯೇ ಎಂದುಕೊಂಡೆ.

ಅಷ್ಟುಹೊತ್ತಿಗೆ ಕೊರವ ಹತ್ತಿರ ಬಂದು ಕುಳಿತು ಮುಂದುವರಿಸಿದ.

‘ಇವತ್ತು ಕಾರ್ಮಿಕರ ಸಭೆ ನಡೆಯುತ್ತಿತ್ತು ದೂರದಲ್ಲಿ ನಿಂತು ಕೇಳಿದೆ. ಆ ಮುಖಂಡ ಏನು ಹೇಳಿದಾ ಗೊತ್ತೆ? ನಮ್ಮ ಸರ್ಕಾರ ಬಂದರೆ ಎಲ್ಲವನ್ನೂ ರಾಷ್ಟ್ರೀಕರಣಮಾಡಿ **ನನ್ನ** ಹತೋಟಿಗೆ ತೆಗೆದುಕೊಂಡು ಕೆಲಸಮಾಡುತ್ತೇನೆ’ ಎಂದ.

ಇದ್ದ ಜನರೆಲ್ಲಾ ಕಂಡಾಪಟ್ಟೆ ಚಪ್ಪಾಳೆ ತಟ್ಟಿದರು. ಕುರಿಗಳು ಶುದ್ಧ ಕುರಿಗಳು ಅವನು ಹೇಳಿದ್ದನ್ನ ಅರ್ಥ ಮಾಡಿಕೊಳ್ಳಕ್ಕೂ ಬರುಲ್ಲ. ಎಂದ.

—ಹೌದಾ! ಎಂದೆ.

* * *

ಎರಡು ಮೂರು ದಿನದಿಂದ ಕ್ಲಬ್ಬು ಬಿಕೋ ಅಂತಿತ್ತು. ಯಾಕೆ? ಅಂತ ಯೋಚಿಸಿದಾಗ ಹೊಳೆಯಿತು—ಓಹೋ! ಈ ಕೊರವ ಮೂರು ದಿನದಿಂದ ಕ್ಲಬ್ಬಿಗೆ ಬರಲಿಲ್ಲ ಅಂತ. ಅಂಗೈಲಿ ಎದ್ದ ನರಹುಲಿ ಇದ್ದಹಾಗೆ ಕೊರವ. ಅನಾನುಕೂಲದಿಟ. ಆದರೆ ಅದರಮೇಲೇ ಬೆರಳು ಆಡಿಸೋ ಅಭ್ಯಾಸ ಆಗಿ ಹೋಗಿ, ನರಹುಲೀನ ತೆಗೆದು ಹಾಕಿದರೆ ಅಂಗೈ ಬಿಕೋ ಅನ್ನುಲ್ಲವೇ—ಹಾಗೆ ಕ್ಲಬ್ಬಿಗೆ ಕೊರವ.

ಹೀಗೆ ಯೋಚನೆ ಮಾಡ್ತಾ ಇರೋವಾಗಲೇ ಕೊರವ ಅಚ್ಚುಕಟ್ಟಾದ ಜರಿಪಂಚಕಚ್ಚಪಂಚೆ ಉಟ್ಟು ಉದ್ದಾನೆ ಕರೀಅಂಗಿ ಧರಿಸಿ, ಜರತಾರಿ ರುಮಾಲು ಧರಿಸಿ ಕ್ಲಬ್ಬಿಗಿಳಿದ.

‘ಏನೋ ಇದು! ಮೂರು ದಿನದಿಂದ ಪತ್ತೇನೇ ಇಲ್ಲ. ಮೈ ಚೆನ್ನಾಗಿತ್ತಿಲ್ಲ ಅಂತ ನೆಪ ಹೇಳಬೇಡ ನೋಡುಕ್ಕೆ ವರಪೂಜೆ ವಸ್ತ್ರಾದಿಹಾಗೆ ಕಾಣುತ್ತಿದಿ’ ಎಂದೆ.

‘ಬೇಲೂರಿಗೆ ಹೋಗಿದ್ದೆ ಮೂರುದಿನ. ಸಾಹಿತ್ಯ ಸಂಸ್ಕೃತಿ, ಸಮಾಜ, ಜಾಮಾತೃಭಾಷಾ ಸೇವೆ, ಎಲ್ಲಾ ಮಾಡೋಣ ಅಂತ ಪರಿಷತ್ತಿನ ಸಮ್ಮೇಳನಕ್ಕೆ ಹೋಗಿದ್ದೆ.’


‘ಚೆನ್ನಾಗಿ ನಡೀತೇನೋ! ಏನು ಅಲ್ಲಿನ ಸುದ್ದಿ’ ಎಂದು ಅರ್ಥ ಬರುವಂತೆ ಕಿವಿ ಮುಂದಕ್ಕೆ ಚಾಚಿ ಹುಬ್ಬು ಎತ್ತಿದೆ.

“ಸಮ್ಮೇಳನ ಬಲು ಸೊಂಪಾಗಿತ್ತಪ್ಪ. ದೇವಸ್ಥಾನದ ಶಿಲಾ ಪ್ರತಿಮೆಗಳಿಗಿಂತ ಬಂದವರೇ ನೋಡುಕ್ಕೆ ಚೆನ್ನಾಗಿದ್ದರು. ಸುಲಕ್ಷಣವಾಗಿದ್ದರು. ಸುಮಧುರ ಮಂದಹಾಸದಿಂದ ಕೂಡಿದ್ದರು. ಆದರೆ ನೋಡು ಬಾಯಿಬಿಟ್ಟು ಬಣ್ಣ ಕೆಡಿಸಿಕೊಂಡರು. ಆಗಲೇ ನನಗೆ ತೋಚಿದ್ದು ಕಾಲಾನುಕಾಲದಿಂದ ಕಲ್ಲಿನ ಬಾಲಕ ಬಾಲಕಿಯರನ್ನೇ ಜನ ಏಕೆ ಮೆಚ್ಚಿದ್ದು ಅಂತ.

....ಆ ಕಲ್ಲಿನ ಬಾಲಕ ಬಾಲಿಕೆಯರು ಬಾಯಿಬಿಟ್ಟು ಮಾತನಾಡುಲ್ಲ ಆದೇ ಅವುಗಳ ಹಿರಿಗುಣ” ಎಂದ.

ಕೊರವನ ದೃಷ್ಟಿಯೇ ಹೀಗೇ! ಅರಮನೆಗೆ ಆಹ್ವಾನಿತನಾಗಿ ಹೋದರೂ ಅಲ್ಲಿ ಅರಳನ್ನೇ ಕೇಳಿ ತಿನ್ನುವ ಸ್ವಭಾವ.

* * *



ನನ್ನ ಯೋಜನೆ !

— ೦ —

ಕೆಲಸಕ್ಕೆ ಬಾರದ ಕ್ಯಾಲೆಂಡರುಗಳಿಂದಲೂ, ಗ್ರೂಪ್ ಫೋಟೋಗಳಿಂದಲೂ ಮನೆಯಗೋಡೆಗಳನ್ನು ಅಲಂಕರಿಸುವ ಬದಲು ಶೈಕ್ಷಣಿಕ ಚಿತ್ರಗಳಿಂದಲೂ, ಬೋಧಪ್ರದವಾದ ಬರವಣಿಗೆಗಳಿಂದಲೂ ಅಲಂಕರಿಸಿದರೆ ಹೆಚ್ಚು ಪ್ರಯೋಜನವಾಗುತ್ತದೆಂಬ ಗೃಹಾಲಂಕಾರದ ಸೂಕ್ಷ್ಮ ಪರಿಜ್ಞಾನವೊಂದು ಈಗ್ಗೆ ಕೆಲವು ದಿವಸಗಳ ಹಿಂದೆ ನನ್ನ ಮಿದುಳಿಗೆ ಹೊಳೆಯಿತು. ಮನೆಗೆ ಅಲಂಕಾರ ಪ್ರಾಯವಾಗಿರಬೇಕು. ಅದರಿಂದ ಮನೆ ಮಕ್ಕಳಿಗೆ ಯೋಗ್ಯ ಶಿಕ್ಷಣ ದೊರಕುವಂತಿರಬೇಕು. ಅಂತಹ ಗೃಹಾಲಂಕಾರದ ಒಂದು ದ್ವಿಮುಖೋದ್ದೇಶ ಯೋಜನೆಯನ್ನು ಆ ತರುಣದಲ್ಲೇ ಸಿದ್ಧಗೊಳಿಸಿದೆ. ಅದನ್ನು ನಾನು ನನ್ನ ಮನೆಯಲ್ಲಿ ಹೇಗೆ ಕಾರ್ಯರೂಪಕ್ಕೆ ತಂದೆ, ಅದರ ಪರಿಣಾಮ ಏನಾಯ್ತು ಎಂಬುದನ್ನು ಇಲ್ಲಿ ಸ್ವಲ್ಪ ವಿವರಿಸುತ್ತೇನೆ.

ಗೋಡೆ ಕಾಣದಹಾಗೆ ತುಂಬಿದ್ದ ಗೆದ್ದಲು ಹಿಡಿದ ಗ್ರೂಪ್ ಫೋಟೋಗಳನ್ನು, ಕೆಲಸಕ್ಕೆ ಬಾರದ ಹಳೆ ಕ್ಯಾಲೆಂಡರುಗಳನ್ನೂ ಕಿತ್ತುಬಿಸಾಕಿ, ಮೇಲೆ ಹೇಳಿದ ತತ್ವದ ಹಿನ್ನೆಲೆಯಲ್ಲಿ ಹೊಸದಾಗಿ ಮನೆಯ ಅಲಂಕಾರ ಪ್ರಾರಂಭಿಸಿದೆ. ಪ್ರಾಥಮಿಕ ಶಾಲೆಗಳಲ್ಲಿ ತೂಗುಹಾಕುವ ಬೋರ್ಡುಗಳಂತೆ—"ದೇವರು ದೊಡ್ಡವನು," "ತಂದೆ ತಾಯಿಗಳಲ್ಲಿ ಭಕ್ತಿಇಡಿ", "ಪರೋಪಕಾರವೇ ಪರಮಾತ್ಮನ ಸೇವೆ", "ಯಾವಾಗಲೂ ನಿಜವನ್ನೇ ನುಡಿಯಿರಿ"—ಹೀಗೆ ಹಲವು ಬೋಧನೆಗಳನ್ನು ಕೆರಟ್ಟಿನಮೇಲೆ ಗುಂಡಗೆ ಬರದು ಕತ್ತರಿಸಿ ಬೋರ್ಡುಗಳನ್ನು ಸಿದ್ಧಮಾಡಿದೆ. ಅವನ್ನು ವರಾಂಡದ ಗೋಡೆಮೇಲೆ ಸಾಲಾಗಿ ತೂಗುಹಾಕಿದೆ. ಚಿಕ್ಕ ಪುಟ್ಟಮಕ್ಕಳು ವರಾಂಡದಲ್ಲಿ ಹೆಚ್ಚು ಹೊತ್ತು ಕಾಲಕಳೆಯುತ್ತವೆ. ಅವುಗಳ ಎಳೆಯ ಮನಸ್ಸಿನ ಮೇಲೆ ಈ ಬೋಧನೆಗಳು ಪ್ರಭಾವ ಬೀರಬಲ್ಲವು ಎಂದು ನನ್ನ ನಂಬಿಕೆ.

ಆರೋಗ್ಯಶಾಸ್ತ್ರದ ಪಾಠವೂ ಮೊಟ್ಟಮೊದಲು ಮನೆಯಲ್ಲೇ ಪ್ರಾರಂಭವಾಗಬೇಕಷ್ಟೆ. ಮಕ್ಕಳು ಆರೋಗ್ಯ ನಿಯಮಗಳನ್ನು ಅಭ್ಯಾಸಿಸಲು ಅನುಕೂಲವಾಗುವಂತಹ ವಾತಾವರಣವನ್ನು ಮನೆಯಲ್ಲಿ ಏರ್ಪಡಿಸುವುದು ಅವಶ್ಯಕ. ಅದರಂತೆ ಕೆಲವು ಆರೋಗ್ಯನಿಯಮಗಳನ್ನು ಬರೆದು ಬೋರ್ಡುಗಳನ್ನು ಸಿದ್ಧಮಾಡಿದೆ. "ಹಲ್ಲುಗಳನ್ನು ಶುಭ್ರವಾಗಿಡಿ", "ತಣ್ಣೀರಿನ ಸ್ನಾನ ಆರೋಗ್ಯಕರ," "ಉಗುರು

ಗಳನ್ನು ಕತ್ತರಿಸಿ"—ಹೀಗೆ ಬರೆದ ಬೋರ್ಡುಗಳನ್ನು ಬಚ್ಚಲು ಮನೆಯಲ್ಲಿ ತೂಗು ಹಾಕಿದೆ. ಆಹಾರಕ್ಕೆ ಸಂಬಂಧಿಸಿದ ಕೆಲವು ನಿಯಮಗಳನ್ನು ಬರೆದು ಅಡಿಗೆಮನೆ ಯಲ್ಲಿ ತೂಗುಹಾಕಿದೆ. ವಿವಿಧ ಆಹಾರ ಸತ್ವಗಳಿರುವ ಧಾನ್ಯಗಳ ಮತ್ತು ತರಕಾರಿ ಗಳ ಪಟ್ಟಿ, ಜೀರ್ಣಾಂಗಗಳ ಚಿತ್ರ ಎರಡನ್ನೂ ಊಟದ ಮನೆಯಲ್ಲಿ ಹಾಕಿದೆ. ಉಗ್ರಾಣದಲ್ಲಿ 'ಪ್ಲೇಗು ಉಪದ್ರವ'ದ ವಿವರಣೆ ಅಚ್ಚಾಗಿದ್ದ ಪೋಸ್ಟರನ್ನು ಹಚ್ಚಿದೆ. ಅಸ್ತಿ ಪಂಜರದ ಒಂದು ಭಾರಿ ಚಾರ್ಟನ್ನು ತಂದು ಬೀದಿ ಬಾಗಲಿಗೆ ನೇರವಾಗಿ ಒಳಗೋಡೆಗೆ ತೂಗುಹಾಕಿದೆ. ಇದು ಆರೋಗ್ಯಶಾಸ್ತ್ರ ಕಲಿಯಲು ಸಹಕಾರಿ ಯಾದ್ದರೂ ಆಗಬಹುದು. ಮನೆಗೆ ಅಲಂಕಾರ ಹೇಗೆ ಅನ್ನುತ್ತೀರ? ಅಲಂಕಾರ ಏಕೆ ಅಲ್ಲ? ಮನಸ್ಸಿಗೆ ಹಿತವಾದದ್ದು ಕಣ್ಣಿಗೆ ಹಿತವಾಗಿರದೆ? ಚರಾಚರ ವಸ್ತುಗಳನ್ನು ಸೃಷ್ಟಿ ಸಿದ ಆಭಗವಂತನ ಅತ್ಯದ್ಭುತ ಸೃಷ್ಟಿಯೇ ಅಲ್ಲವೆ ಈಅಸ್ತಿ ಪಂಜರ. ಆ ಎಲಬುಗೂಡು ನನಗೆ ದೇವರ ಗುಡಿ! ಆಮೇಲೆ ಮಿದಳಿನ ಚಿತ್ರವನ್ನು ನನ್ನ ಕೊಠಡಿಯ ಗೋಡೆಗೆ ತೂಗುಹಾಕಿದೆ. ಹೀಗೆ ನನ್ನ ಮನೆ ಒಂದು ಜ್ಞಾನಮಂದಿರವಾಗಿ ಬೆಳಗಿತು. ಇದ ರಿಂದ ಮಕ್ಕಳಿಗೆ ಪ್ರಯೋಜನವೂ ಆಯ್ತು ಎಂದು ಹೇಳಲೇ ಬೇಕು.

ಗಡಿಬಿಡಿಯಲ್ಲಿ ಬಚ್ಚಲು ಮನೆಗೆ ನುಗ್ಗಿ ನಾಲ್ಕುಚೊಂಬು ನೀರು ಮೈಮೇಲೆ ಸುರಿದುಕೊಂಡು ಬಂದು ಬಿಡಬೇಕು ಎಂದೋಡುವ ರಾಮುವನ್ನು "ಹಲ್ಲುಗಳನ್ನು ಶುಭ್ರವಾಗಿಡು" ಎನ್ನುವ ಬೋರ್ಡು ತಡೆದು ನಿಲ್ಲಿಸುವುದು. ಒಡನೆಯೇ ರಾಮುವಿಗೆ ಏನೋ ಚುಚ್ಚಿದಂತಾಗಿ ಶುಭ್ರವಾಗಿ ಹಲ್ಲುಜ್ಜಿ ಸ್ನಾನಮಾಡುವನು. ಕಿಟ್ಟೊದು ಸ್ವಲ್ಪ ಸುಳ್ಳುಹೇಳುವ ಸ್ವಭಾವ. ಈಗ ಏನಾದರೂ ಅಂತಹ ಪ್ರಸಂಗಬಂದರೆ ವರಾಂಡದಲ್ಲಿ ನಿಲ್ಲಿಸಿಕೊಂಡು ವಿಚಾರಿಸುತ್ತೇನೆ. "ಯಾವಾಗಲೂ ನಿಜವನ್ನೇ ನುಡಿಯಿರಿ" ಎಂದು ಸಾರುವ ಬೋರ್ಡನ್ನು ದಿಟ್ಟಿಸಿ ನೋಡುತ್ತ 'ಕದ್ದಿದ್ದುಂಟು ಅಣ್ಣ' ಅನ್ನು ತ್ತಾನೆ.

ಹೀಗೆ ನಿಂತಾಗ, ಕೂತಾಗ, ಆಟವಾಡುವಾಗ, ಊಟ ಮಾಡುವಾಗ ಈ ನೀತಿ ವಾಕ್ಯಗಳು, ಆರೋಗ್ಯ ನಿಯಮಗಳು ಅವರ ಕಣ್ಣುಮುಂದೆ ಸುಳಿಯುತ್ತವೆ. ಇದ ರಿಂದ ಸದ್ಗುಣಗಳು, ಸದ್ವರ್ತನೆಗಳು ಅವರ ಎಳೆಯ ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲುತ್ತವೆ.

ಮಾಧ್ಯಮಿಕ ಶಾಲೆಯಲ್ಲಿ ಓದುವ ಇಬ್ಬರು ಹುಡುಗರು ಊಟಕ್ಕೆಕೂತಾಗ ಸ್ವಾರಸ್ಯವಾಗಿ ಚರ್ಚೆಮಾಡುವರು. ಅವತ್ತು ಬಡಸಿದ ಆಹಾರ ಪದಾರ್ಥಗಳಲ್ಲಿ ಯಾವಯಾವ ಆಹಾರ ಸತ್ವಗಳಿವೆ ಎಂಬುದನ್ನು ಪಟ್ಟಿನೋಡಿ ತಿಳಿದುಕೊಳ್ಳುವರು. ಶೀನ ನನಗೆ ಆಗಾಗ್ಗೆ ಹೇಳುತ್ತಾನೆ—"ಬರಿ 'A' ವಿಟಮನ್ ತರಕಾರಿಗಳನ್ನೇ ತರುತ್ತೀಯಲ್ಲಣ್ಣ, 'ಬಿ' ಅಥವ 'ಸಿ' ತರಬಾರದೆ. ಈರುಳ್ಳಿ, ಸೌತೇಕಾಯಿ ಈಚಗೆ

ತರಲೇಣ್ಣ" ಎಂದು. ನೋಡಿದರ—ಈ ಗೃಹಾಲಂಕಾರದ ಪರಿಜ್ಞಾನ ಎಷ್ಟು ಸೂಕ್ಷ್ಮ ವಾಗಿದೆ! ಈ ಶಿಕ್ಷಣ ವಿಧಾನ ಎಷ್ಟು ಪರಿಣಾಮಕಾರಿಯಾಗಿದೆ! ಇದು ನನ್ನ ಯೋಚನೆ ಕಾರ್ಯ ರೂಪಕ್ಕೆ ತಂದ ತರುಣದಲ್ಲಿ ಕಂಡ ಫಲಿತಾಂಶ!

ಅವತ್ತು ಭಾನುವಾರ ಆದರೂ ಸಾಹೇಬರು ಹೇಳಿ ಕಳಿಸಿದ್ದರಿಂದ ಕಛೇರಿಗೆ ಹೋಗಿದ್ದೆ. ಮಧ್ಯಾಹ್ನ ಮನೆಗೆ ಬಂದುನೋಡಿದರೆ ಮನೆಯಲ್ಲಿ ಯಾರೂ ಇರಲಿಲ್ಲ. ಪಕ್ಕದ ಮನೆಯವರು ಬೀಗದಕ್ಕೆ ಕೊಟ್ಟರು. ಮಡದಿ ಮಕ್ಕಳನ್ನು ಕಟ್ಟಿಕೊಂಡು ಮ್ಯಾಟ್ನೀಗೆ ಹೋಗಿದ್ದಾಳೆಂದು ತಿಳಿಯಿತು. ಮಿಗಿಸಿಟ್ಟದ್ದನ್ನು ನಿಧಾನವಾಗಿ ತಿಂದು ಆರಾಮವಾಗಿ ಕೂತುಕೊಂಡೆ. ನನ್ನ ಮನೆ ಪರಿಸ್ಥಿತಿ ನಿಮಗೆಗೊತ್ತಿಲ್ಲ! ಸಿನಿಮಾಕ್ಕೆ ಏಕೆ ಹೋಗಿದ್ದೆ ಈ ಹೊತ್ತಿನಲ್ಲಿ ಅಂತ ಕೇಳಿದರೇನೇ ರೇಗಿ ತಿರಿಗಿಬೀಳು ತ್ತಾಳೆ. ಎದುರಿಗೆನಿಂತು ಮಾತಾಡೋಕೆ ಯಾರಿಗಾಗುತ್ತೆ ? ಹಾಗೆಯೇ ಯೋಚನೆ ಮಾಡುತ್ತಿರುವಾಗ ಒಂದು ಹೊಸ ಉಪಾಯ ಹೊಳೆಯಿತು—

ಬೋಧಪ್ರದವಾದ ಬರವಣಿಗೆಗಳಿಂದ ಮನೆಯನ್ನು ಅಲಂಕರಿಸಿ ಮನೆಮಕ್ಕಳಿಗೆ ಸದ್ಗುಣಗಳನ್ನು ಕಲಿಸಿದಂತೆ ಸಮಯೋಚಿತವಾಗಿ ಹಿತವಚನಗಳಿಂದ ಮನೆಯನ್ನು ಅಲಂಕರಿಸಿ ದೊಡ್ಡವರ ನಡವಳಿಕೆಗಳನ್ನೂ ತಿದ್ದಿ ಗೃಹಶಾಂತಿಯನ್ನೇಕೆ ರಕ್ಷಿಸಿಕೊಳ್ಳ ಬಾರದು ಅಂತ. ಆ ಹುಮ್ಮಸ್ಸಿನಲ್ಲಿ ಹಲವು ಬೋರ್ಡುಗಳನ್ನು ಬರೆದೆ. "ಗೃಹ ಕೃತ್ಯದ ನಿರ್ವಹಣೆ ಗೃಹಣಿ ಜವಾಬ್ದಾರಿ", "ಸಿನಿಮ ನೋಡುವುದು ಹಾನಿಕರ", "ಮಿತವ್ಯಯದಿಂದ ಲಾಭವುಂಟು"—ಹೀಗೆ ಬರದು ಸದರಿ ಬೋರ್ಡುಗಳನ್ನು ಅಡಿಗೆ ಮನೆಯಲ್ಲಿ ಬಾಗಲು ಕಿಟಕಿಗಳ ಮೇಲೆ ತೂಗುಹಾಕಿದೆ!

ಆ ಮೇಲೆ ಹಾಗೇ ಶಿವು ರೂಮಿಗೆಹೋದೆ. ಶಿವು ಇಂಜನಿಯರಿಂಗ್ ಕಾಲೇಜಿ ನಲ್ಲಿ ಓದುತ್ತಿದ್ದಾನೆ. ಅವನ ಬೀರು ತೆಗೆದೆ. ಅಲ್ಲಿ 'ಕುಕ್ಕು' ಚಿತ್ರಗಳಿದ್ದವೇ ಹೊರತು ಪುಸ್ತಕ, ಕಾಗದ ಏನೂ ಇರಲಿಲ್ಲ. ಕುಕ್ಕುವಿಗೂ ಇಂಜನಿಯರಿಂಗ್‌ಗೂ ಏನು ಸಂಬಂಧ? ಅದರಲ್ಲೂ ನಮ್ಮ ಶೀನು ವಿದ್ಯುಛಕ್ತಿವಿಶಯ ಓದುವುದು. ನನಗೆ ಷಾಕ್ ಹೊಡದಹಾಗಾಯ್ತು!. ಅಷ್ಟುಹೊತ್ತಿಗೆ ಎದುರು ಮನೆ ನಾಣಿ ಬಂದು "ಶೀನು 'ಸೆಪ್ಟೆಂಬರ್ ಅಫೇರ್‌ಗೆ' ಹೋಗುತ್ತಾನಂತೆ. ಬರೋದು ಹೊತ್ತಾಗುತ್ತಂತೆ" ಅಂತ ಹೇಳಿಹೋದ. ಅಲ್ಲ, ಮಾರ್ಚಿಯಲ್ಲಿ ಇವನು 'ಸೆಪ್ಟೆಂಬರ್ ಅಫೇರ್' ನೋಡುತ್ತಕೂತರೆ ಮೇನಲ್ಲಿ ರಿಸಲ್ಟು 'ಗಾನ್ ವಿತ್‌ದಿವಿಂಡ್' ತಾನೆ! ನನಗೆ ರೇಗಿ ಹೋಯಿತು. ಒಡನೆಯೇ—"ಅಪ್ಪ ಹಾಕಿದ ಆಲದಮರ ಶಾಶ್ವತವಲ್ಲ", "ಈ ವರ್ಷವೂ 'ಆರ್ಡಿನೆನ್ಸ್' ನೆಚ್ಚಿಕೆ ಏನು?—ಹೀಗೆ ಎರಡು ಬೋರ್ಡುಗಳನ್ನು ಬರೆದು ಅವನ ರೂಮಿನಲ್ಲಿ ತೂಗುಹಾಕಿ ಹೊರಕ್ಕೆ ಬಂದೆ.

ರಾತ್ರಿ ಮಡದಿ, ಮಗ ಬಹಳಹೊತ್ತು ಸಮಾಲೋಚನೆ ನಡೆಸುತ್ತಿದ್ದರು. ಶಿವು ೧೨ ಗಂಟೆ ತನಕ 'ನಿಶಾತೈಲ' ಉರಿಸಿದ. ನನ್ನ ಬೋರ್ಡುಗಳು ಅವನ ಮನಸ್ಸಿ

ನಲ್ಲೇ ತೀವ್ರ ಪರಿಣಾಮವನ್ನುಂಟುಮಾಡಿರಬೇಕು! ಮಾರನೇ ದಿವಸ ಬೆಳಗ್ಗೆ ನನ್ನ ಪದ್ಧತಿಯಂತೆ ಎಂಟು ಗಂಟೆಗೆಲ್ಲ ಎದ್ದು ಹಾಸಿಗೆಮೇಲೆ ಕೂತುಕೊಂಡೆ. ನಾನು ಕಣ್ಣು ಬಿಟ್ಟತಕ್ಷಣ ನನ್ನ ಎದುರು ಒಂದು ಬೋರ್ಡು ಕಾಣಿಸಿತು. "ಬೆಳಿಗ್ಗೆ ಎಂಟು ಗಂಟೆಗೇಳುವವನು ಶುದ್ಧ ಸೋಮಾರಿ" ಅಂತ ಆ ಬೋರ್ಡಿನಲ್ಲಿ ಬರೆದಿತ್ತು. ಅದನ್ನು ನೋಡಿ ನನಗೇನೋ ನಾಚಿಕೆಯಾಯಿತು. ಆದರೂ ಅಭ್ಯಾಸ ಬಲದಿಂದ ಹಾಗೆಯೇ ಕೂತು ಅಡಿಗೆ ಮನೆಕಡೆ ದೃಷ್ಟಿಬೀರಿದೆ ಪದ್ಧತಿಯಂತೆ ಕಾಫಿ ಗೋಸ್ಕರ. ಆದರೆ ಅಲ್ಲಿ ನನಗೆ ಕಂಡಿದ್ದೇನು? "ಹಲ್ಲುಜ್ಜದೆ ಕಾಫಿ ಕುಡಿಯಬಾರದು" ಅಂತ ಸಾರುವ ಇನ್ನೊಂದು ಬೋರ್ಡು! ಅರೆಕ್ಷಣ ತಲೆತಗ್ಗಿಸಿದೆ. ಮನಸ್ಸಿನಲವಲವಿಕೆ ಮಾಯ ವಾಯಿತು. ಎದ್ದು ಕೋಟಿನ ಜೇಬಲ್ಲಿ ನೆಸ್ಯದಡಬ್ಬಿ ತೆಗೆದು ಕೊಳ್ಳಲುಹೋದೆ. ಜೇಬಿಗೆ ಕೈಹಾಕುತ್ತಿದ್ದಹಾಗೇ "ನೆಸ್ಯದಿಂದ ಹೃದಯರೋಗಗಳು ಬರುತ್ತೆ" ಅಂತ. ಇನ್ನೊಂದು ಬೋರ್ಡು ಮೂಗು ತಿವಿಯಿತು. ಬೆಳಗ್ಗೆ ಎದ್ದ ತಕ್ಷಣ ಜೀವನವೇ ಹೀಗೆ ಮಾರ್ಪಾಟಾಗಿಹೋಯಿತು! ಕೋಪ ಮಿತಿಮೀರಿ ಏರುತ್ತಿತ್ತು. ಅಡಿಗೆ ಮನೆಗೆ ನುಗ್ಗಿದೆ. "ಗೃಹಣಿಯ ಸ್ಥಾನ ಅಡಿಗೆ ಮನೆಯಲ್ಲೇ ಅಲ್ಲ" ಅಂತ ಬರದ ಒಂದು ಬೋರ್ಡನ್ನು ಒಂದು ಸರ್ವೆತುಂಡಿಗೆ ತೂಗುಹಾಕಿ ಒಲೆಮೇಲೆ ನಿಲ್ಲಿಸಿದ್ದರು ಆಯುಧಪೂಜೆ ದಿನ ಕತ್ತಿ ಒರಗಿಸಿಟ್ಟ ಹಾಗೆ!

ನಾನು ಇಂಗು ತಿಂದ ಮುದಿಕಪಿಯಂತಾದೆ. ಸುತ್ತಲೂ ಒಮ್ಮೆ ದಿಟ್ಟಿಸಿದೆ. ನರಕದ ದೃಶ್ಯ ಕಂಡಂತೆ ಕಾಣಿಸಿತು. ಗೋಡೆತುಂಬ ಹಾಳು ಬೋರ್ಡುಗಳು. ಗಾಳಿಬೀಸಿದಾಗ ಪಟಪಟ ಅಂತ ಒಂದಕ್ಕೊಂದು ಬಡಿಯುತ್ತವೆ. ಒಂದೊಂದು ಬೋರ್ಡು ಅಲಗಿದಾಗಲೂ ಕತ್ತಿ ಬೀಸಿದಹಾಗೆ ಆಗುತ್ತಿತ್ತು. ಮರುಕ್ಷಣದಲ್ಲೆ ಎಲ್ಲಾ ಬೋರ್ಡುಗಳನ್ನೂ ಕಿತ್ತು ಗುಡ್ಡೆಹಾಕಿ ಬೆಂಕಿಹಚ್ಚಿದೆ. ಮಿದುಳಿನ ಚಿತ್ರವನ್ನು ಹರಿದು ಚೂರು ಚೂರು ಮಾಡಿದೆ, ಅಸ್ತಿಪಂಜರದ ಚಾರ್ಟನ್ನು ಹೈಸ್ಕೂಲಿಗೆ ಕಳಿಸಿಕೊಟ್ಟೆ. ಅಂಬಾಳ್ ಪುಡಿ, ಫ್ಲೆವರ್ ಕಾಫಿ, ಸವರನ್ ಬೀಡಿ ಕ್ಯಾಲೆಂಡರು ಗಳನ್ನು ಹೊಸದಾಗಿ ಸಂಪಾದಿಸಿ ತೂಗುಹಾಕಿದೆ.

ಹೀಗೆ ಸದ್ಭಾವನೆಗಳಿಂದ ನಾನು ಒಂದು ಒಳ್ಳೆ ಯೋಚನೆಯನ್ನ ಕಾರ್ಯಗತ ಮಾಡಿದರೂ ಅದು ಕ್ರಮೇಣ ಅನುಸರಿಸಿದ ರೀತಿಯಲ್ಲಿ ಯೋಚನೆ ಮಣ್ಣು ಪಾಲಾ ಯಿತು. ಸಾಮಾನ್ಯವಾಗಿ ಎಲ್ಲ ಭಾರಿಭಾರಿ ಯೋಜನೆಗಳೂ ಹೀಗೆ ಅಲ್ಲವೆ?

— o —

ಹುಡುಗರು ಕಲಿತ ಪಾಠ

ಪಾಪ! ಹನುಮಂತಹೆಡ್ ಮಾಸ್ತರದು ಏನೂ ತಪ್ಪಿಲ್ಲ. ಆದರೂ, ಅವರನ್ನ ಮನೆಗೆ ಕಳುಹಿಸೇಬಿಟ್ಟರು. ಅನ್ಯಾಯದ ಜಗತ್ತು, ಈಗಿನದು.

ಈ ಊರಿಗೆ ಹನುಮಂತಮಾಸ್ತರು ವರ್ಗವಾದದ್ದು, ಅವರ ತಪ್ಪೆ? ಅತ್ತಿಲ್ಲ ಕರೆದಿಲ್ಲ, ತೆಗೆದು ಎಸೆದೇ ಬಿಟ್ಟರು, ಅವರನ್ನ. ಅರವತ್ತಡಿ ಆಳದ ಭಾವಿ, ರೂಪಾಯಿಗೆ ಅರ್ಧ ಸೇರು ಹಾಲು, ಮನೆಯಲ್ಲಿ ತಿಗಣೆ, ಟ್ಯೂಷನ್ ಹುಡುಗರೊಬ್ಬರೂ ಇಲ್ಲ. ಚೇರ್ಮನ್ ಮಕ್ಕಳಿಗೆ ಬಿಟ್ಟಿ ಪಾಠ ಹೇಳಿಕೊಡಲೇಬೇಕು....ನಮ್ಮೂರಿಗೆ ಬರುವುದಕ್ಕೆ ಯಾರು ಒಪ್ಪುತ್ತಾರೆ? ಸಾಲದುದಕ್ಕೆ, ಹಿಂದೆ ಇಲ್ಲಿ ಇದ್ದ ಮೈಲಾರಪ್ಪ ಮಾಸ್ತರ ಅರ್ಜಿಗಳು ಬೇರೆ, ಬೆದರಿಕೆಗಳು ಬೇರೆ, ಊರಿನವರ ನಿಯೋಗಗಳು ಬೇರೆ.

ಆದರೂ, ವಿಧಿ ಅವರನ್ನು ನಮ್ಮೂರಿಗೆ ಎಳೆದುಕೊಂಡು ಬಂದೇ ಬಂತು, ಹನುಮಂತ ಮಾಸ್ತರು ತುಂಬಾ ಒಳ್ಳೆಯವರು, ದೇವರ ಸಾಕ್ಷಿಯಾಗಿ ಪಾಠ ಹೇಳುವರು, ನಿರ್ವಂಚನೆಯಾಗಿ ದುಡಿಯುವವರು. ಬೇರೆ ಊರಿಗೆ ವರ್ಗವಾಗಿದ್ದರೂ, ಮೈಲಾರಪ್ಪ ಮಾಸ್ತರಿಗೆ ಈ ಊರಿನ ಸ್ಕೂಲಿನ ಮೇಲೆಯೇ ಕಣ್ಣು, ಕೆಟ್ಟಕಣ್ಣು.

ನಮ್ಮೂರು ಶಾಲೆಯಲ್ಲಿ ಬೆಂಚುಗಳನ್ನೆಲ್ಲ ಸಾಲಾಗಿ ಜೋಡಿಸಿ, ಮಾಸ್ತರುಗಳ ಮೇಜು ಕುರ್ಚಿಗಳನ್ನ ಯಾವಕಡೆ ಇರಿಸಿದಾರೆಂದರೆ, ಹುಡುಗರಿಗೆಲ್ಲ ಕಿಟಕಿಗಳ ಮೂಲಕ ರಸ್ತೆ ಕಾಣಿಸುತ್ತೆ, ಮಾಸ್ತರುಗಳಿಗೆ ಮಾತ್ರ ಕಿಟಕಿಗಳ ಮೂಲಕ ಹಿತ್ತಲು ಕಾಣುತ್ತೆ....ಅರ್ಥವಾಯಿತೆ, ನಾನು ಹೇಳೋದು? ಇದರಿಂದ, ರಸ್ತೆಮೇಲೆ ಒಂದು ಹೋತ ಹೋದರೂ, ಹುಡುಗರು ಅದನ್ನೇ ಗಮನಿಸಿ ಪಾಠದಲ್ಲಿ ಅಸಡ್ಡೆ ತೋರಿಸುವುದು ಸಹಜ, ಅವಕ್ಕೇನು ಗೊತ್ತು ಪಾಠದ ಮಹತ್ವ? "ಬಸ್ ಬಂತು ಬಸ್! ಸಾಹುಕಾರರ ಲಾರಿ ಬಂತು! ಮಿಲಿಟರಿ ಕಾರ್ ಬಂತು! ರೋಡ್ ರೋಲರ್ ಬಂತು! ಗಾಡಿ ಎತ್ತು ಬೆದರಿತು!" ಎಂದು ಬಗೆ ಬಗೆಯಾಗಿ ಬಾಲಕರು ಕಿರಲುತ್ತಿದ್ದರೆ, ಪುಸ್ತಕ ಮುಗಿಸುವುದು ಯಾವಾಗ?

ನೀವು ಹೇಳಬಹುದು, ಒಂದು ಸುಲಭೋಪಾಯಾನ! ಮಾಸ್ತರುಗಳ ಕುರ್ಚಿ ಮೇಜುಗಳನ್ನ ಅತ್ತಕಡೆಯಿಂದ ಇತ್ತ ಕಡೆಗೆ ಸಾಗಿಸಿ, ಹುಡುಗರನ್ನ ಆ ಕಡೆಯಿಂದ ಈ ಕಡೆಗೆ ತಿರುಗಿಸಿ, ಎಂದು. ಅಲ್ಲವೆ? ಹಾಗೆ ಮಾಡಿದರೆ, ಸರಿ, ತಾನೆ? ಪಾಠ ಪ್ರವಚನಗಳು ನಿರ್ವಿಘ್ನವಾಗಿ ನಡೆಯುತ್ತವೆ, ತಾನೆ?

ಮತ್ತೆ, ಅದಷ್ಟನ್ನು ಮಾಡಿದುದಕ್ಕೆ, ನೋಡಿ, ಹನುಮಂತ ಹೆಡ್‌ಮಾಸ್ತರ್ ಮನೆಗೆ ಹೋದರು, ಮೊನ್ನೆ ಅಳುತ್ತಾ.

ಇರಿಸುವುದನ್ನೇನೋ ಇರಿಸಿದರು. ಬಡವಾ, ಮಡಗಿದಹಾಗಿರು, ಎಂದು ಜವಾನ ಕುರ್ಚಿ ಮೇಜುಗಳನ್ನು ಅತ್ತಕಡೆ ಇಟ್ಟ. ಹೆಣ ಹೊರುವವನಿಗೇನು, ಹಿಂದು, ಮುಂದು, ಎಂದು ಮಾಸ್ತರುಗಳೂ ಅತ್ತಕಡೆ ನಿಂತು, ಪಾಠಮಾಡಿದರು. ಆದರೆ, ಸುದ್ದಿ ಮೈಲಾರಪ್ಪನ ಮಾಸ್ತರ ಕಿವಿ ಮುಟ್ಟುತ್ತಲೂ, ಅವರು ಹುಡುಗರ ಕಿವಿ ನುಲಿಚಿ, ಮುಷ್ಕರ ಹೂಡಿಸಿ, ಮೂರು ಮೂರು ಜನ ಶಾಲೆಮುಂದೆ ಒಂದೊಂದು ಗಂಟೆ ಉಪವಾಸ ಸತ್ಯಾಗ್ರಹ ಮಾಡಿಸಿದರು. ಸರಿ! ಪತ್ರಿಕಾ ಪ್ರತಿನಿಧಿಗಳು ಬಂದು ಹುಡುಗರ ಹೇಳಿಕೆ ತೆಗೆದುಕೊಂಡರು, ಫೋಟೋ ತೆಗೆದರು, ಊರಿನಲ್ಲೆಲ್ಲ ಕೋಲಾಹಲ ಮೆರವಣಿಗೆ, ಬಂದವರಿಗೆಲ್ಲ ಹಾರ ತುರಾಯಿ ಊಟ ಸತ್ಕಾರ, ಸಭೆ. "ಆಸನ ಮುಷ್ಕರ" "ಹುಡುಗರೇ! ಹಿಂದುಮುಂದಾಗಬೇಡಿ" ಎಂಬ ಕೂಗು, ಊರಲ್ಲೆಲ್ಲ.

ಸರ್ಕಾರದವರು ಸುಮ್ಮನಿರಲಿಲ್ಲ. ಇನ್‌ಸ್ಪೆಕ್ಟರ್ ಸಾಹೇಬರು ಬಂದು ತನಿಖೆ ನಡೆಸಿ, ಹೊಸ ವ್ಯವಸ್ಥೆ ಸಮರ್ಪಕವಾಗಿದೆ, ಇದುವರೆಗೂ ಅತ್ತಲಾಗಿಂದ ಪಾಠ ಹೇಳುತ್ತಿದ್ದದ್ದು ತಪ್ಪು, ಹನುಮಂತ ಹೆಡ್ಮಾಸ್ತರು ನಿಜವಾಗಿಯೂ ಅಭಿನಂದನಾರ್ಹರು, ಎಂದು ರಿಪೋರ್ಟುಮಾಡಿದರು. ಇದನ್ನುಕೇಳಿ, ಜನ ಇದ್ದದ್ದೂ ರೇಗಿದರು. ವಿರೋಧ ಪಕ್ಷದವರೆಲ್ಲ ಕೆರಳಿ ಕೆಂಡವಾಗಿ, ನಮ್ಮೂರಿಗೆ ಧಾವಿಸಿದರು. "ನಮ್ಮೂರಿಗೆ ಛಲೊ" ಎಂದು ಕೂಗುತ್ತ ನೂರಾರು ಜಾಥಾಗಳು ಮುಂಬರಿದುವು. ಒಂದೊಂದು ಗಂಟೆ ಮೂರು ಮೂರು ಹುಡುಗರದು ಉಪವಾಸ ಸಾಲದು ಎಂದು ಹತ್ತು ಹತ್ತು ಹುಡುಗರು ಆರಾರು ನಿಮಿಷ ಉಪವಾಸ ಕೂತರು. ಹುಡುಗರ ದಿಟ್ಟತನಕ್ಕೆ ನಾಡೇ ದಿಗ್ಭ್ರಮೆಗೊಂಡಿತು. ಉಪವಾಸ ಮುಕ್ತಾಯ ಕಾಲದಲ್ಲಿ ಅವರಿಗೆ ಹಣ್ಣು ಹಂಪಲು ಮೆಡಲುಗಳನ್ನು ಹಂಚಿದರು. ಊರಲ್ಲೊಂದು ತಿಂಗಳು ಪೂರ್ತಿ, ಒಳ್ಳೇ ಪರಿಷೆ. ನೂರಾರು ರೂಪಾಯಿ ವ್ಯಾಪಾರವಾಯಿತು, ನಮಗೆಲ್ಲ.


ಹನುಮಂತ ಹೆಡ್ಮಾಸ್ತ್ರರಿಗಂತೂ ಆ ಒಂದು ತಿಂಗಳೂ ಪೂರ್ತಿ ಉಪವಾಸವೆ! ಆದರೆ, ಅದು ಹೇಗೆ ಸತ್ಯಾಗ್ರಹ ಎನಿಸಿಕೊಂಡೀತು?

ಹಿತ್ತಲಕಡೆ ಕಿಟಕಿಯ ಮೂಲಕ ಹುಡುಗರ ದೃಷ್ಟಿ ಹರಿವಂತೆ ಅವರನ್ನು ಕೂರಿಸಿದ್ದು ಪ್ರತಿಗಾಮಿ ಪದ್ಧತಿ; ಮುಂದೋಡುತ್ತಿರುವ ಜಗತ್ತಿನ ಪ್ರತೀಕವಾದ ರಸ್ತೆಯ ಕಡೆಯಿಂದ ಅವರ ಗಮನವನ್ನು ಸೆಳೆದದ್ದರಿಂದ ಹನುಮಂತ ಹೆಡ್ಮಾಸ್ತ್ರರಿಗೆ ಶಿಕ್ಷಣದ ಅ ಆ ಇ ಕೂಡ ಗೊತ್ತಿಲ್ಲ, ಅವರು ಮಾಸ್ತರ್‌ಗಿರಿಗೆ ನಾಲಾಯಕ್ಕು, ಎಂದೆಲ್ಲ ಊರಲ್ಲೂ ಕೂಗಿದರು, ತಂತಿಗಳೂ ಹೋದುವು, ನೋಟೀಸುಗಳೂ ಅಚ್ಚಾದುವು, ಲಾವಣಿಗಳು ತಯಾರಾದುವು.

ಅವರ ಪಕ್ಷ ವಹಿಸಿದವರಿಗೆಲ್ಲ ಮುರ್ದಾಬಾದೇ ಗತಿ. ನಾನು ಈ ಊರಲ್ಲಿ ಒಂದು ಸಣ್ಣ ಚಿಲ್ಲರೆ ಅಂಗಡಿದಾರ. ನನ್ನ ಅಂಗಡಿಯಿಂದ ಅವರಿಗೆ ಕಾಫಿಪುಡಿ ಸಕ್ಕರೆ ಸಪ್ಲೈಮಾಡಿದೆ. ಅಯ್ಯೋ! ನನಗೂ ಬಂತು ಧಿಕ್ಕಾರ! ಯಥಾಪ್ರಕಾರ, ಕೊನೆಗೆ ಕೂಗಾಡಿದವರೇ ಗೆದ್ದರು, ಹನುಮಂತ ಹೆಡ್‌ಮಾಸ್ತರು ಮನೆಗೆ ಹೋದರು, ಆ ಇನ್‌ಸ್ಪೆಕ್ಟರ ಸಂಬಳ ಇಳಿಸಿ ಅವರಿಗೆ ಬುದ್ಧಿ ಕಲಿಸಿದರು. ನಮ್ಮೂರು ಹುಡುಗರು ಈಗ, ಅಳುತ್ತಾ ಸ್ಕೂಲಿಗೆ ಹೋಗುತ್ತಿದ್ದಾರೆ, ಆ ಒಂದು ತಿಂಗಳು ಅವರು ಖುಷಿಯಾಗಿದ್ದರಂತೆ....ಮೈಲಾರಪ್ಪ ಹೆಡ್‌ಮಾಸ್ತರ್ ಪುನಃ ನಮ್ಮ ಊರಿಗೆ ಬಂದಿದ್ದಾರೆ. ಆದರೆ, ಅವರಿಗೂ ಇಷ್ಟರಲ್ಲೇ ಕೊಡುತ್ತಾರೆ ಈ ಹುಡುಗರು, ಕಾಯಿಚಿಪ್ಪ. ಪಾಠ ಕಲಿತು ಬಿಟ್ಟವೆ, ಹೈಕಳು. ಅವರು ಕೆಮ್ಮಿದರೆ ಸಾಕು, ಉಪವಾಸ ಸತ್ಯಾಗ್ರಹ ಹೂಡುತ್ತಾರೆ. ನೋಡುತ್ತಾ ಇರಿ.

—ಪಿ. ಜಿ. ಕುಲಕರ್ಣಿ.

— o —



ಪರದ ಪವಾಡ

ಕೇಳಿರಿ ಕೇಶವರಾಯರ ಕಥೆಯನು:
ಶ್ರೀರಾಂಪುರದಲೊ ಮಾವಳ್ಳಿಯಲೊ | ಅಲಸೂರಲ್ಲೋ ಗುಟ್ಟಳ್ಳೀಲೋ
ಎಲ್ಲೋ ಇರುವರು ಕೇಶವರಾಯರು | ನೆನಪೂ ನನಗೆ ಸರಿಯಾಗಿಲ್ಲ.
ಎಲ್ಲಾದರು ಅವರಿರಲೀ ಹೋಗಲಿ | ಮುಖ್ಯವೆ ಅಲ್ಲಾ ಆ ಸುದ್ದಿ.
ಏಕೊ ಏನೋ, ಲಿವರೋ, ಹೊಟ್ಟೆಯ | ನೋವೋ, ಸಾಲದ ಶೂಲವೊ, ಮಾವನ ಮೇಲಿನ
ಸಿಟ್ಟೋ, ಗ್ರೀಡೊ, ಚಾಡಿಯ ಗೋಳೋ, | ಪಿತ್ತವು ಕೆರಳಿತು, ಹುತ್ತವು ತೆರೆಯಿತು,
ಕೇಶವರಾಯರ ಮೂಗಿನ ತುದಿಯಲಿ | ಕೋಪವು ತಾಂಡವವಾಡಿತ್ತು.
ಹುಡುಗರಿಗೇಟು, ಬೆಕ್ಕಿಗೆ ಕಿಕ್ಕು | ಕಂಡರೆ ಕೆಂಡವೆ, ಜಗವೊಂಡು.
ತೆವಳುವ ಮಗುವನೆ ಒದ್ದರು ರಾಯರು | ಅವಳಿಗು ಆಯಿತು ಸಾವಿರನಾಮ.
ಹಾಲಿಗೆ ಸಾಲದು ಹುಣಿಸೆಯ ಹಣ್ಣು | ಮಜ್ಜಿಗೆಯಲ್ಲೂ ಕಲ್ಲೂಮಣ್ಣು
ಸ್ನಾನದ ನೀರಿಗೆ ಸಾಲದು ಶಾಖ | ದೋಸೆಗೆ ಸಾವಿರ ತೂತೇ ಇಲ್ಲ.
ನೋಡಿರಿ, ಸಾರ! ಡಬ್ಬಲ್ ಖಾರ | ಕಾಫೀ ಎಂಬೆಯ ಈ ಬಿಸಿ ನೀರ?
ರೇಗುತ ರೇಗುತ ರಗಳೆಯಮಾಡಿ | ಕೂಗುತ ಕೂಗುತ ಜಗಳವನಾಡಿ
ಅಳಿಸುವರವಳನು ಸುಖವೇಇಲ್ಲ | ಶಾಪಕೆ ಎಂದೂ ಬಿಡುವೇ ಇಲ್ಲ.

* * *

ಆಯುಸ್ಸೆಲ್ಲವು ಹೀಗೆಯೆ ಇರುವರೊ? ಕಾಯುವುದಿಲ್ಲವೆ ಅವಳನು ದೇವರು?
ನಗುವೇ ಬೆಳಗದೆ, ವರೆಗೂ ಕೊನೆಯ | ಲಗುವಾಗಿರಿಸದೆ ರಾಯರ ಮನೆಯ?
ಎಂದರು ನೆರೆ ಹೊರೆ ನಂಟರು ಬೈದು; | ನೊಂದರು ಗೆಳೆಯರು ಬಿಸುಸುಯ್ದು.

* * *

ಆದರೆ ಮೊನ್ನೆ, ಹೇಗೋ, ಎಂತೋ | ದೇವರ ಕರುಣೆಯ ಮಳೆಯೇ ಬಂತೋ
ಯಾರೋ ಏನೋ ಮದ್ದನು ಕೊಟ್ಟರೊ | ಮಾಟವೊ ದೊಡ್ಡ ಪವಾಡವ ನಿಟ್ಟರೊ?
ರಾಯರು ಬೆಳಗಿನ ಏ. ಎಂ. ಫ್ಲೋರಲಿ | ಕಂಡರು ಗೋಡೆಯ ಕಾಲೆಂಡರ್ರಲಿ
ರಾಧಾಕೃಷ್ಣರ ಮೋಹನ ಚಿತ್ರವ | ಬಾಧಾರಹಿತ ಸಂಸಾರದ ಚಿತ್ರವ.
ಕೃಷ್ಣನು ರಾಧೆಯ ಹಿಂದೆಯನಿಂತು |–ನಯನ ಮನೋಹರ ದಂಪತಿ ಕೂಟ–
ನಯನಗಳೆರಡನು ಮುಚ್ಚುವನೋಟ!

* * *

ಕಂಡರು ರಾಯರು........ಅವರಿಗು ತಾಕಿತು
ಪ್ರೇಮದ ಕಡಲಿನ ನಗುನೊರೆ ಯಂಚಿನ | ಅಲೆಗಳು ಕಲ್ಲೆದೆ ಬಂಡೆಯನಪ್ಪಿತು.
ಮಕ್ಕಳ ಬೈದೂ ಸತಿಯನು ಹಿಂಸಿಸಿ | ಇಕ್ಕಳದಲ್ಲಿ ಸಿಕ್ಕಿಸಿ ಬಿಕ್ಕಿಸಿ
ಹಾವೂ ಸಾಯದು ಕೋಲೂ ಮುರಿಯದು | ಹಾಳೂ ಮೂಳೂ, ನನಗೂ ಗೋಳು

ಥತ್! ಥತ್!........| ಛೆ! ಛೆ!
ಇನ್ನಿದು ಪೊದ್ದು | ಎಂದರು, ರಾಯರು, ಮೇಲೆದ್ದು.

* * *

ಸದ್ದೇಮಾಡದೆ ನಿದ್ದೆಯನೊದ್ದು | ನಡೆದರು ರಾಯರು ಅಡುಗೆಯ ಮನೆಗೆ
ಒಲೆಯನು ತಾನೇ ಹೊತ್ತಿಸಿ ಬೇಗನೆ | ಬಿಸಿ ಬಿಸಿ ಕಾಫಿಯ ಮಾಡಿದರು.
ಮಕ್ಕಳನೆಲ್ಲ ಎಬ್ಬಿಸಿ ಸಾಲಿಗೆ | ಮುಖಗಳ ತೊಳೆದು ತಲೆಗಳ ಬಾಚಿ
ಸೋನಾಬಾಯೀ ಏಳುವ ಮುನ್ನವೆ | ಕೋ! ನಾ ಮಾಡಿದೆ, ಎಂದರು, ನಕ್ಕರು!

* * *

ಸೋನಾಬಾಯಿಯ ಕಣ್‌ಕಿವಿ ತೆರೆದುವು | ಬೋನಾ ಫೈಡಿಸ್ ನಂಬಲೆ ಇಲ್ಲ
ಅಯ್ಯೋ ಎನ್ನುತ ಓಡಿದಳಾಚೆಗೆ | ತೆಗೆದೊಗೆದಾಚೆಗೆ ನಾಚಿಗೆ ಗೀಚಿಗೆ.
ದೇವಾ! ಗಂಡನ ಮೆದುಳೀ ಪಚ್ಚಡಿ | ನ್ಯಾಯವೆ ಬಡವಳ ತಲೆಗೀ ಚಪ್ಪಡಿ
ಎಂದಳು ಮಕ್ಕಳ ಬಾಚುತಲಿ | ಕುಯ್ಯೋ ಮರ್‍ರೋ ಅರಚುತಲಿ

* * *

ಕೇಶವರಾಯರು ಕಾಫಿಯ ಕುಡಿಸೆ | ಬೀದಿಗೆ ಇಳಿದರು, ಹೂ ಮುಡಿಸೆ
ಯಾಕೆ? ಸೋನಾ! ಸೋನೀ ಬಾರೆ! | ಸೋನೋ. ಸೋನೇ, ಸೋನೂ ಬಾರೆ!

ಎಂದರು ಹಿಂದೆಯೆ ನಿಂತಾ ಸೋನಿಯ |–ರಾಧಾಕೃಷ್ಣರ ರೀತಿಯಲವರು–
ನಯನಗಳೆರಡನು ಬಿಗಿಬಿಗಿಯಿಂದ | ಮುಚ್ಚಿದ ಅಚ್ಚರಿ ಏನೆಂಬೆ ?
ನೆರೆಹೊರೆ ಜನಗಳು ನೋಡುತ ನಿಂತರು | ಕೇಶವರಾಯರ ಹೊಸಪರಿಯ

* * *

ಹುಚ್ಚಾಸ್ಪತ್ರೆಗೆ ಟ್ಯಾಕ್ಸಿಯು ಹೊರಡಿತು | ವ್ಯಾಕ್ಸಿಮುಮಲ್ಲೇ ಅತ್ತಳು ಹೆಂಡತಿ
ವೈದ್ಯರು ರಾಯಗೆ ಹೇಳಿದರಂತೆ | "ಒಂದೇ ಹಾರಿಗೆ ಹಾರಲು ಹೋದರೆ
ಕಾಲೇ ಕುಂಟು, ನಾನೇ ನಂಟು" | "ಹೋಗಿರಿ ಮನೆಗೆ, ಸುಖದಲಿ ಬಾಳಿರಿ"

—ನಾ. ಕ.

(F. W. Thomasನ ಒಂದು ಪದ್ಯವನ್ನನುಸರಿಸಿ)

ಕೋದಂಡನ ಕೊಡೆರಿಫೇರಿ

ತಲೆಸಿಡಿಯುವ ಉರಿ ಬಿಸಿಲಿಗೆ ಬಟ್ಟತಲೆ ಬಲಿ ಕೊಡಲು ಹಿಂದು ಮುಂದೆ ನೋಡುತ್ತಿದ್ದೆ. ಆದರೆ ಹೊರಡಲೇಬೇಕಿತ್ತು. ಮೀನಾಕ್ಷಿ ಎಲೆ ಮಡಿಚಿ ಅಡಿಕೆ ಪುಡಿ ಅಂಗೈಯಲ್ಲಿ ಹಿಡಿದು ಬಂದಳು. ನನ್ನ ಅಂಗೈಗೆ ಅಡಿಕೆಪುಡಿ ಕೊಡವಿ ಹುಬ್ಬು ಏರಿಸಿ "ಹೊರಡಲೇ ಬೇಕಿತ್ತೇನು—ಉರಿಬಿಸಿಲು ಕ್ಯಾಶುಯಲ್ ಲೀವ್‌ಗೆ ಚೀಟಿ ಕಳಿಸಬಾರದೆ?" ಎಂದಳು—ಅರಕ್ಷಣ ತೂಕಡಿಸುವವನಿಗೆ ಒರದಿಂಬಿಟ್ಟು ಗಾಳಿ ಹಾಕಿದಂತಾಯ್ತು. ಆದರೂ ಅವಳ ಆಗಿನ ಆ ಮಾತು ಆಪ್ಯಾಯ ಮಾನವಾಗಿರ ಲಿಲ್ಲ. ಮೊನ್ನೆತಾನೆ ಸಾಹೇಬರು ಮೊನೆಮಾತಾಡಿ ಚುಚ್ಚಿದ್ದು ಇನ್ನು ಘಾಯ ಮಾದಿರಲಿಲ್ಲ. ಇವಳು ಈರೀತಿ ಕುಚೋದ್ಯಕ್ಕೆ ಅಂದದ್ದು ನನಗೆ ಆ ಉರಿ ಬಿಸಿಲಲ್ಲಿ ಕಿಡಿಕಿಡಿಯಾಗುವಂತೆ ಮಾಡಿತು. ಫಡೀರ್ ಎಂದು ಬಾರಿಸಲೇ ಕೆನ್ನೆಗೆ ಎಂದು ಕೆಂಗಣ್ಣು ಬಿಟ್ಟ ಮರುಕ್ಷಣವೇ ಮೀನಾಕ್ಷಿಯ ತಿಳಿ ಅರಿಶಿನದ ತುಂಬಿದ ಗುಲಾಬಿ ಕೆನ್ನೆಯನ್ನು. ಕಂಡು ಬಾರಿಸಲು ಕೈಯೇ ಬರದೆ—ಅಂಗೈಯ್ಯ ಅಡಿಕೆ ಪುಡಿಯನ್ನು ಬಾಯಿಗೆ ಸುರಿದು ಕೊಂಡೆ.

ಎಳೆಯ ಬೆಂಡೆಕಾಯಿಯಂಥ ಬೆರಳುಗಳ ಮಧ್ಯೆ ಸಿಕ್ಕಿಕೊಂಡ ಮಡಚಿದ ಎಲೆ ಅಡಿಕೆಯನ್ನು ಬಾಯಿಗೆ ತುರುಕಿಕೊಂಡು "ಮಿಾನೂ ಸರ್ಕಾರಿ ಕೆಲಸವೆಂದರೆ ಮಸ್ಕಿರಿ ಎಂದು ತಿಳಿದೇನು...." ಎಂದು ನನ್ನ ಕೆಲಸದ ಮುಖ್ಯತೆ ತಿಳಿಸಿದೆ. ತೂಕಡಿಕೆ ಕಣ್ಣೆಳದುಕೊಂಡು ಹೋಗುತ್ತಿತ್ತು. ಮೀನಾಕ್ಷಿ ನನ್ನ ಕಣ್ಣನ್ನೇ ದಿಟ್ಟಿಸಿ ನೋಡಿ "ಆಫೀಸಿಗೆ ಹೋಗಿ ತೂಕಡಿಸುವ ಬದಲು ಮನೆಯಲ್ಲೇ ಮಲಗ ಬಹು ದಲ್ಲಾ!" ಎಂದು ಟೀಕಿಸಿದಳು. ನಾನು ಆಚ್ಚರಿಗೊಂಡೆ. ಎಲಾ ಇವಳು ಇಷ್ಟು ಸೂಕ್ಷ್ಮವೆಂದು ನಾನು ತಿಳಿದಿರಲಿಲ್ಲ. ನಾನು ಆಫೀಸಿಗೆ ಹೋಗಿ ಮಲಗುವುದು ಇವಳಿಗೆ ಹೇಗೆ ತಿಳಿಯಿತು? ಎಂದು ಯೋಚಿಸ ತೊಡಗಿದೆ. "ಕೊಡೆ ಇದ್ದಿದ್ದರೆ!" ಎಂದು ಬಾಯಿ ಚಪ್ಪರಿಸಿದಳು ಮೀನಾಕ್ಷಿ. ಕೊಡೆ ಎಂದೊಡನೆ ಮಾವನವರ ವ್ಯಕ್ತಿ ಎದುರಿಗೆ ನಿಂತಿತು—ಮರುಕ್ಷಣವೇ ಮದುವೆ, ಕಾಶಿಯಾತ್ರೆ ಆ ಬಿಸಿಲು ಆ ವಾಲಗ ಎಲ್ಲಾ ಸಾಲಾಗಿ ನೆನಪಿಗೆ ಬಂತು—ಅಷ್ಟೆಲ್ಲ ಸಂಭ್ರಮದ ಅವಾಂತರ ಆಜೀವ ಪರ್ಯಂತ ನೆಳಲಲ್ಲಿ ಬಿಸಿಲಲ್ಲಿ (ಸಧ್ಯಕ್ಕೆ ಬಿಸಿಲು ಮಾತ್ರವೇ ಆಗಿದೆ) ಈ ಮೀನಾಕ್ಷಿ ಯೊಡನೆ ಸಂಸಾರ ಸಾಗಿಸುವುದಕ್ಕಾಗಿಯೇ ಎಂದು ಮನದಟ್ಟಾದಾಗ ಇವಳ ಮೇಲೆ ರೇಗಿದೆ.

"ನಿಮ್ಮಪ್ಪ ಕೊಟ್ಟ ಕೊಡೆ ಮೂಲೆ ಗುಂಪಾಗಿ ನೀನು ಮನೆಗೆ ಬಂದ ಮರು ವರ್ಷವೇ ಹಾಳಾಗಿ ಗೂಟ ಸೇರಲಿಲ್ಲವೆ? ಯಾವ ಬಾಯಿಂದ ನೆನಪು ಮಾಡುವಿ

'ಕೊಡೆ ಇದ್ದಿದ್ದರೆ' ಎಂಬ ಸಮಾಚಾರ" ಎಂದು ಈ ಉರಿ ಬಿಸಿಲಿಗೆ ನನ್ನ ಬಕ್ಕ ತಲೆ ಆಹುತಿಯಾಗಲು ಅವಳಪ್ಪನೇ ಕಾರಣವೆಂಬುದನ್ನು ತೋರಿಸಿಕೊಟ್ಟೆ. "ಕಣ್ಣು ತಂಪಾಗಲು ಕೆಂಪಾದ ಹದಿನೆಂಟು ವರ್ಷದ ನನ್ನೇ ನಿಮಗೆ ಧಾರೆ ಎರೆದು ಕೊಟ್ಟಿರುವಾಗ—ಈ ಚಿಲ್ರೆ ವಿಷಯಗಳಿಗೆ ಗಮನ ಕೊಡಬಾರದು" ಎಂದು ನನಗೇ ಬುದ್ಧಿ ಹೇಳಲು ತೊಡಗಿದಳು. ಆದರೆ ಅವಳ ಮಾತು ಹೊರಗಿನಿಂದ ಬಂದ "ಕೊಡೇ ರೀಪೇರೀೀ ಮಾಡಿಸ್ತಿರಿ ಕೊಡೇರಿಪೇರೀೀ" ಎಂಬ ಕೂಗಿನೊಡನೆ ಬೆರೆತು ಹೋದದ್ದರಿಂದ ಅವಳ ಮಾತು ಕೇಳದವನಂತೇ ನಟಿಸಿದೆ.

"ಆ ಕೊಡೆ ಸರಿಮಾಡಿಸಿದರೆ—ಇಷ್ಟೆಲ್ಲ ಗೋಳೂ ಮಾತೂ ಟೀಕೆ ತಾತ್ಪರ್ಯ ಒಂದಕ್ಕೂ ಅವಕಾಶವಿರೋಲ್ಲ......." ಎಂದು ಆ ರಿಪೇರಿಯವನನ್ನು ಕರೆದಳು. ಹಾಗೂ ಈ ಮಾತಿನಲ್ಲಿ ಹೊತ್ತಾಗಿಹೋಗಿತ್ತು. ಇನ್ನು ಫೋನಿನಲ್ಲಿಅಜ್ಜಿಯ ಆಸ್ತಮ ಮತ್ತೆ ಮರುಕಳಿಸಿತೆಂದು ಹೇಳಿ ಒಂದು ದಿನ ಸಿ. ಎಲ್. ಗಿಟ್ಟಿಸಬಹುದು—ಕೊಡೆಯ ರಿಪೇರಿಯೂ ಆದರೆ ನಿಶ್ಚಿಂತೆಯಾಗಿ ಕೆಲಸಕ್ಕೆ ಹೋಗಬಹುದೆಂದು ಪಕ್ಕದ ಮನೆ ಫೋನಿನಿಂದ ಇಷ್ಟೆಲ್ಲಾ ಮಾಡಿಯೂ ಬಿಟ್ಟೆ. ಇಷ್ಟು ಹೊತ್ತಿಗೆ ಆ ಕೊಡೆ ರಿಪೇರಿಯವ ಅಂಗಳದಲ್ಲಿ ತನ್ನ ಅಂಗಡಿ ಹರವಿಕೊಂಡಿದ್ದ. ಮೀನಾಕ್ಷಿ ನನ್ನ ಕೊಡೆ ತಂದು ಅವನ ಮುಂದೆ ಹಾಕಿದಳು. "ಕೊಂಚ ಒಳಕ್ಕೆ ಹೋಗಿ ಸಾರ್ ಕೊಡೆ ಕೊಡವಬೇಕು........" ಎಂದ ಆ ರಿಪೇರಿ ಆಳು. ಎಲಾ ಕೊಡೆ ಕೊಡವಬೇಕಾದರೆ ನಾವೇಕೆ ಒಳಕ್ಕೆ ಹೋಗಬೇಕೆಂದು ಅರ್ಥವಾಗಲಿಲ್ಲ. ನಮ್ಮ ಅನುಮಾನ ಅವನಿಗೇ ಅರ್ಥವಾಗಿರಬೇಕು—"ನಾಲ್ಕು ವರ್ಷ ಉಗ್ರಾಣದ ಅಟ್ಟದ ಮೇಲೆ ಧೂಳು ಕುಡಿಯುತ್ತಾ ಬಿದ್ದ ಈ ಪ್ರಾಣಿಯನ್ನ ಕೊಡವಿದರೆ—ನೀವೇ ಎದ್ದು ಹೋಗುವಿರಿ—ಅದರ ಬದಲು ಮೊದಲೇ ಹೇಳಿದ್ದರೆ ಒಳ್ಳೆದಲ್ಲವೆ?" ಎಂದ. ಬಿಸಿಲಲ್ಲಿ ಹೋಗಿದ್ದರೂ ದುಃಖವಿದ್ದಿಲ್ಲ ಕೇವಲ ಈ ಕೊಡೆ ರಿಪೇರಿಯವನ ಈ ಕಟು ಟೀಕೆ ಬಹು ಸಂಕಟ ಪಡಿಸಿತು. ಒಂದು ಮುರುಕು ಜಾಕಾಯಿ ಹಲಿಗೆ ಪೆಟ್ಟಿಗೆ. ಒಂದು ಕಟ್ಟು ಕೊಡೆ ಕಡ್ಡಿಯನ್ನೇ ಆಸ್ತಿಯಾಗಿಯುಳ್ಳ ಈ ಕಡು ಮೂರ್ಖನಿಗೆ ನನ್ನ ಕೊಡೆ ನಾಲ್ಕು ವರ್ಷ ರಿಪೇರಿ ಕಾಣದೆ ಬಿದ್ದಿದೆ ಎಂಬ ಟೀಕೆ ಯಾತಕ್ಕೆ? ಈ ಮಾತಿಗೆ ಮೀನಾಕ್ಷಿ "ನೋಡಪ್ಪ—ನಮ್ಮಪ್ಪನವರು ನಾಲ್ಕು ವರ್ಷದ ಕೆಳಗೆ ಕೊಟ್ಟರು....ಹೇಳಿ ಹೇಳಿ ಸಾಕಾಯ್ತು ನಿನ್ನ ಕರೆದು ಸರಿಮಾಡಿಸಿ ಎಂದು....ನಮ್ಮ ಮಾತು ಗಂಡಸರು ಕೇಳುತ್ತಾರೆಯೇ?........" ಎಂದು ಗೋಣಗಿದಳು. ಎಲಾ ಇವಳಪ್ಪ ಕೊಟ್ಟದ್ದು ಹೊಸ ಛತ್ರಿಯೆ? ಎಂದು ನೆನಪು ಮಾಡಿಕೊಳ್ಳುತ್ತಿದ್ದಾಗ ಆ ರಿಪೇರಿಯವ ಮಧ್ಯೆ ಮತ್ತೆ ತನ್ನ ಮೂಗು ಹಾಯಿಸಿದ.

"ಯಾಕೆ ಅಮ್ಮಾ ಹಾಗನ್ನುತ್ತೀರಿ ...ನಾನೂ ಗಂಡಸು—ನನಗೂ ಮನೆಯಲ್ಲಿ ಹೆಂಡತಿ ಇದ್ದಾಳೆ—ನಾನು ಅವಳ ಮಾತು ಕೇಳುತ್ತಿಲ್ಲವೇನು?....ಹಾಗೆ ಸ್ವಾಮಿಯವರೂ ಗಂಡಸರು ನಿಮ್ಮ ಮಾತು ತೆಗೆದು ಹಾಕುತ್ತಾರೆಯೆ?....ಹೀಗೆ ನೀವು

ಗಂಡಸರೆಲ್ಲಾ ಹಾಗೇ ಎನ್ನುವ ಮಾತು ಒಪ್ಪುವದಲ್ಲ...ಅಮ್ಮ...." ಎಂದು ನಾನು ಕೋಳಿ ಕುಕ್ಕನೆಂದು ಆ ಕೇವಲ ಕೊಡೆ ರಿಪೇರಿಯವ ಅಂದದ್ದು ನಾನು ಹೇಗೆ ತಡೆಯಲಿ? "....ಅಯ್ಯಾ—ನಿನ್ನ ಕೆಲಸವೇನೋ ಅದು ಮಾಡಿಕೊಂಡು ಬಾಯಿ ಮುಚ್ಚಿ ಹೊರಡು—ತಲೆಹರಟೆ ಬೇಡ.... ಈ ಕೊಡೆ ಸರಿಮಾಡೋಕೆ ಏನು ಕೊಡ ಬೇಕು ಹೇಳು...." ಎಂದು ಆ ರಿಪೇರಿಯವನಿಗೆ ದಬಾಯಿಸಿದೆ. "ಮಾತಿಗೆ ಮಾತು ಬಂತು ಹಾಗಂದೆ ನನಗ್ಯಾಕೆ ಸ್ವಾಮಿ ಬೇಕು ಯಾರು ಯಾರಿಗಾದರೂ ಕುಕ್ಕಲಿ...." ಎಂದು ಕೊಟ್ಟ ಕೊಡೆಯನ್ನು ಬಿಚ್ಚಿದ....ಅದನ್ನೇ ಆಳವಾಗಿ ನೋಡಿದ—ನಸುನಕ್ಕ—ಆನಗುವಿನಲ್ಲಿ ತಾತ್ಸಾರ, ಅಯ್ಯೋ ಬೇವರ್ಸಿ ಛತ್ರಿಯೇ ಎನ್ನುವ ಕೊಂಕು ಕಾಣಿಸಿತು. ಕೊಡೆ ಕಡ್ಡಿಗಳು ಬಟ್ಟೆ ಹಾದು ಹರಿದ ಹಳೇ ಸರ್ಕಸ್ ಕಂಪನಿಯ ಡೇರೆ ನೆನಪಿಗೆ ತರುತ್ತಿತ್ತು—ಅಲ್ಲಲ್ಲಿ ಕರೀಬಟ್ಟೆಯ ತುಂಡು ಜೋಲಾ ಮಾಲೆಯಾಗಿ ನೇತಾಡು ತ್ತಿತ್ತು. ಇಷ್ಟೆಲ್ಲಾ ಅದರ ಸ್ವರೂಪಕಂಡ ಆ ಕೊಡೆ ಸರಿಮಾಡುವವ ಗಟ್ಟಿಯಾಗಿ ಗಹಗಹಿಸಿ ನಕ್ಕ "ಯಾಕಯ್ಯಾ—ನಗು—ಈ ಹುಡುಗಾಟ ಬೇಡವೆಂದು ಹೇಳ ಲಿಲ್ಲವೆ?...." ಎಂದು ಗದುರಿದೆ. "ಇದರ ಎಲ್ಲಾ ಕಡ್ಡಿಗಳು ಹೊಸಬಟ್ಟೆ ಮಧ್ಯದ ಕೋಲು....ಇವಿಷ್ಟೂ ಬದಲಾಯಿಸಬೇಕು—ಈ ಚಿಂದಿ ಬಟ್ಟೆ ಮೂಟೇನ ಸರಿಮಾಡ ಬೇಕಾದರೆ....ನನಗ್ಯಾಕೆ ಸ್ವಾಮಿ ಹೆಚ್ಚುಮಾತು—ಕೊಡೆ ಸರಿಮಾಡೋ ಕೋದಂ ಡಾಂದ್ರೆ ಮಾವ ಕೊಟ್ಟದ್ದೇಂತ ನಾನ್ಯಾಕೆ ಕೇಳಲಿ?...." ಎಂದು ತನ್ನ ಪೆಟ್ಟಿಗೆ ತೆಗೆದು ರಿಪೇರಿ ಸಾಮಗ್ರಿ ಹೊರಕ್ಕೆ ತೆಗೆದುಹಾಕಿದ.

"ನಿನ್ನ ಹೆಸರು ಕೋದಂಡನೆ? ಸೊಗಸಾದ ಹೆಸರು...." ಎಂದು ಅವನನ್ನು ಕೊಂಚ ತಾಜಾಮಾಡಿ ಬಹು ಸ್ವಲ್ಪದರಲ್ಲೇ ರಿಪೇರಿಗಿಟ್ಟಿಸುವ ತಂತ್ರ ಹೂಡಿದೆ. "ನಮ್ಮಜ್ಜನ ಹೆಸರೂ ಅದೇ—ಇದೇ ಜಾಕಾಯಿ ಪೆಟ್ಟಿಗೇಲಿ ಇದೇ ಸಾಮಗ್ರೀಲಿ ಕೊಡೆ ರಿಪೇರಿ ಮಾಡುತ್ತಿದ್ದರಂತೆ. ನನ್ನ ಪೂರ್ವೇತಿಹಾಸ ನಿಮಗೇಕೆ ಹೇಳಲಿ ಸ್ವಾಮಿ—ಈ ನಿಮ್ಮ ಛತ್ರಿ ಇದೆಯಲ್ಲ—ಇದನ್ನ ನಮ್ಮಜ್ಜನೂ ರಿಪೇರಿ ಮಾಡಿದ್ದ ಅಂತ ಮಾತ್ರ ಹೇಳಬಲ್ಲೆ" ಎಂದು ಹುಬ್ಬು ಹಾರಿಸಿದ. ಮೀನಾಕ್ಷಿ ಅಚ್ಚರಿ ಗೊಂಡಳು. ನಾನು ಹೌ ಹಾರಿದೆ. "ಕೇಳಿದೆಏನೇ—ನಿಮ್ಮಪ್ಪ ಕೊಟ್ಟದ್ದು ಹಳೇ ಛತ್ರಿ ಎಂದು ಈಗಲಾದರೂ ಮಂದಟ್ಟಾಯಿತೇನೇ" ಎಂದು ಮೀನಾಕ್ಷಿಯನ್ನು ಟೀಕಿ ಸಿದೆ. ಆ ಕೊಡೆ ರಿಪೇರಿಯವ ಈ ಮಧ್ಯೆ ತನ್ನ ಕಟ್ಟಿಂದ ತೆಗೆದ ಮತ್ತೆರಡು ಹಳೇ ಛತ್ರಿ—ಆ ಬಟ್ಟೆ ಕೊಡೆ ಕಡ್ಡಿ ಮಧ್ಯೆ ನನ್ನದನ್ನೂ ಸೇರಿಸಿಬಿಟ್ಟದ್ದರಿಂದ ನನ್ನ ಮಾಲು ನನಗೇ ಪತ್ತೆ ಹತ್ತದಾಯಿತು. "ಎಲ್ಲಾ ಬೆರಸಿದೆಯಲ್ಲಾ—ನಮ್ಮದು ಬೇರೆ ಇಡಯ್ಯಾ...." ಎಂದು ರೇಗಿದೆ.

"ಭಯಕ್ಕೆ ಕಾರಣವಿಲ್ಲ ಸ್ವಾಮಿ ಯಾವ ಮಾಲು ಎಲ್ಲಿಂದ ಯಾರಿಗೆ ಯಾವತ್ತು ಯಾಕೆ ಯಾವರೀತಿ ಸೇರಿತೆಂದು ನಾನು ಹೇಳೋನು ಇರುವಾಗ ನಿಮ್ಮ ಒಡವೆ ಎಲ್ಲೂ ಹೋಗೋಲ್ಲ....ಪ್ರಕೃತ ಪ್ರಶ್ನೆ ಒಡವೆ ಯಾರದ್ದೂನ್ನೋದೇ ಆಗಿದೆ...."

"ನಿನಗೆ ಪಿತ್ತ ನೆತ್ತಿಗೇರಿದೆ—ಮೀನಾಕ್ಷಿ ಇದೆಲ್ಲಿ ಪ್ರಾರಬ್ಧನ್ನ ಕರೆದೆಯೇ ನೀನು-ಛತ್ರಿ ರಿಪೇರಿ ಮಾಡೋಂದ್ರೆ ಏನಿಲ್ಲದ ಪಟ್ರಂಗನೆಲ್ಲಾ ಹರಟುತ್ತಾನಲ್ಲಾ...."

"ಸುಮ್ಮನಿರೀಂದ್ರೆ ಪಾಪ—ನಾನು ಮಾತಾಡ್ತಿನಿ ನಿಮಗೆ ವಿಪರೀತ ಕೋಪ— ಅಪ್ಪಾ ಕೊದಂಡರಾಮು.... ಇಲ್ನೋಡು ಎರಡು ಕಡ್ಡಿ ಬದಲಾಯಿಸಿ ಹರಿದಿರೋ ಕಡೆ ಎರಡು ಟಾಕು ಹಾಕಿದರೆ ಸರಿಹೋಗುತ್ತೆ.... ಅದಕ್ಕೆ ಏನು ಕೊಡಬೇಕು ನೀನೇ ಹೇಳಪ್ಪ...." ಎಂದು ಮೀನಾಕ್ಷಿ ವಿನಯವಾಗಿ ವ್ಯಾಪಾರದ ವಿಷಯ ಪ್ರಸ್ತಾಪಿಸಿದಳು.

"....ಇಲ್ನೋಡಿ ಅಮ್ಮ ನಿಜ ಹೇಳಿದರೂ ನಂಬ್ತೀರ ಸುಳ್ಳು ಹೇಳಿದರೂ ಹೂಗುಟ್ಟೀರ.... ಈ ಛತ್ರಿ ನಮ್ಮಜನದ್ದು.... ಇದಕ್ಕಾಗಿ ಊರೂರು ಅಲೆದೆ.... ಇದು ನನ್ನ ಅಜ್ಜನ ಆಸ್ತಿ...." ಎಂದ.

ನಾನು "ಅರೆ!...." ಎಂದೆ. ಮೀನಾಕ್ಷಿ "ಇದು ನಮ್ಮಪ್ಪ ನಮ್ಮ ಮದುವೇಲಿ ಕಾಶಿಯಾತ್ರೆ ಕಾಲದಲ್ಲಿ ಇವರಿಗೆ ಕೊಟ್ಟಿದ್ದು.... ನಿಮ್ಮಜ್ಜನಿಗೂ ಇದಕ್ಕೂ ಯಾಕೆ ಗಂಟು ಹಾಕ್ತೀಯಾ.... ನೀನು ರಿಪೇರಿಯವನ ಹಾಗೆ ಕಾಣೋಲ್ಲ—ಇಂಥ ಆಟ ಹೂಡಿದ ಕೊಡೆ ಕಳ್ಳನಹಾಗೆ ಕಾಣುತ್ತಿದ್ದೀಯ.... ನಿನ್ನ ರಿಪೇರಿಗೆ ಬೆಂಕಿಬಿತ್ತು.... ನೀನು ಮೊದಲು ಹೊರಡು ಇಲ್ಲಿಂದ...." ಎಂದು ಅಂದಳು. ನನಗೆ ಆಚಾರ ಹೇಳಿದವಳು ಅವಳೇ ರೇಗಿ ರೇಗಿ ಬಿದ್ದಳು. ಕೋದಂಡ ಮಾತ್ರ ಕೋಪಿಸಿಕೊಳ್ಳದೆ ಗಂಭೀರವಾಗೇ ಇದ್ದ. ಅವನೇ ಶುರು ಮಾಡಿದ "ಇಕೊ ತೊಗೊಳ್ಳಿ.... ನನಗೆ ಬೇಡ.... ನಿಮ್ಮ ಕೊಡೆ—ಇದರ ರಿಪೇರಿಗೆ ೧೪ ರೂಪಾಯಿ ಆಗುತ್ತೆ—ಎಂಟು ಬೆನ್ನು ಕಡ್ಡಿ ಎಂಟು ಒಳಕಡ್ಡಿ ಒಂದು ಕೋಲು ಒಂದು ಹಿಡಿ—ಒಂದು ಬಟ್ಟೆ—ಇದಿಷ್ಟು ಬದಲಾಯಿಸಬೇಕು.... ಹಾಗೇ ತೇಪೆ ರಿಪೇರಿಮಾಡಿದರೆ ನನಗೆ ಅವಮಾನ—ನಿಮ್ಮ ಮಾವ ಯಾರೂಂತ ಜನ ನಿಮ್ಮನ್ನ ಕೇಳ್ತಾರೆ—ಆಗ ನಿಮಗೂ ಅವಮಾನ.... ಪಕ್ಕ ರಿಪೇರಿಗೆ ೧೪ ರೂಪಾಯಿ...." ಎಂದ. ನಾನು ಉಸ್ಸಪ್ಪ ಎಂದೆ—ಮೀನಾಕ್ಷಿ ಮೂರು ತಿಂಗಳ ಕಾಫಿ ಪುಡಿ ಖರ್ಚು ಎಂದಳು "ಹೊಸ ಕೊಡೇನೆ ಬರುತ್ತೆ ೧೦ ರೂಪಾಯಿಗೆ...." ಎಂದು ನಾನು ರಾಗ ಎಳೆದಾಗ "ನಮ್ಮಜ್ಜನ ಕಾಲದ ಕಡ್ಡಿ ಸಾರ್ ಇವು—ಉಕ್ಕು, ಪಕ್ಕಾ ಉಕ್ಕಿನ ಕಡ್ಡಿಗಳು—ಈಗಿನ ಕೊಡೆಗಳಲ್ಲಿ ಬರೀ ಹಂಚಿ ಕಡ್ಡಿಗಳೇ ಕರೀಬಣ್ಣ ಬಳದಿರ್ತಾರೆ ಅಷ್ಟೆ...."

"ನಿಮ್ಮಜ್ಜನ ಮಾತು ಮಾತ್ರ ತೆಗಿಬೇಡ"

"ಯಾಕೆ ಸಾರ್—ಹೋಗಲೀಂತ ನಾನು ಪೋಲೀಸಿಗೆ ಹೇಳದೆ ರಿಪೇರಿ ಕೂಲಿಯಾದರೂ ಗಿಟ್ಟಲೀಂತ ಹೇಳಿದರೆ—ನನಗೇ ದಬಾಯಿಸ್ತೀರೆ...."

"ಪೋಲೀಸು........ ಹುಶಾರ್........ ಹಲ್ಲು" "ಇರ್ಲಿ ಸಾರ್ ಕಂಡೀದೀನಿ........ ಇಲ್ನೋಡಿ........" ಎಂದವನೆ ನನ್ನ ಕೊಡೆ ಅಗಲಿಸಿ ಆರನೆ ಕಡ್ಡಿ ಎಣಿಸಿ ಸೀಮೆ ಸುಣ್ಣದಿಂದ ತಿಕ್ಕಿದ.... ಅದರಲ್ಲಿ "ಈ ಕೊಡೆ ಕುಣಿಗಲ್ ಕೋದಂಡರಾಮು ಉರುಫ್

ಕೋದಂಡ ಸ್ವಂತ ಕೊಂಡದ್ದು...." ಎಂದು ಕೊರೆದಿತ್ತು. ನಾನು ಸುಸ್ತು ಮೀನಾಕ್ಷಿ ಮುಖ ಮುಚ್ಚಿದಳು—ಮಾತೇ ಹೊರಡಲಿಲ್ಲ. ಅವನೇ ಪ್ರಾರಂಭಿಸಿದ "....ಈಗ ನೋಡಿ ರಾಯರೆ ಯಾರದ್ದು ಈ ಕೊಡೆ....ನಿಮ್ಮ ಮಾವನ ಮಾವನದೂ ಕುಣಿಗಲ್ಲೇ ಹೌದೋ?...." "ಹೌದು" ಎಂದಳು ಮೀನಾಕ್ಷಿ. "ಆ ಕುಣಿಗಲ್ಲು ಕೊದಂಡರಾಮ ದೇವರು ನಮ್ಮ ಮನೆ ದೇವರು....ಆ ದೇವರ ಶ್ವೇತಛತ್ರಿನೂ ನಮ್ಮಜ್ಜನೇ ರಿಪೇರಿ ಮಾಡ್ತಿದ್ದ....ಆಗ ಬಂದದ್ದು ಇದು....ಕೋದಂಡರಾಮ ದೇವರ ತೇರಿಗೆ ಇದೇ ಛತ್ರಿ ಹಿಡಿದು ಬಂದಿದ್ದು ನಮ್ಮಜ್ಜ....ಸಮಾರಾಧನೆ ಸಮಯದಲ್ಲಿ ಮೂಲೆ ಗೊರಗಿಸಿದ್ದ ಕೊಡೆ ಮಂಗಮಾಯ....ಗುಲ್ಲೋ ಗುಲ್ಲು—ಕೋದಂಡನ ಕೊಡೆ ಹೋಯ್ತುಂತೇಂತ—ಮುದುಕ ಅನ್ನ ನೀರು ಬಿಟ್ಟ—ಮಗನಕಾಲಕ್ಕೆ ಹುಡುಕಿಸಿದರು—ಈಗ ನೋಡಿ ಮೊಮ್ಮಗ ನಾನು ಅಂದು ಕಳದದ್ದು ಇಂದು ಪತ್ತೆ ಮಾಡಿದೀನಿ.... ಪೋಲೀಸರಿಗೆ ಹೇಳಿ ಕೇಸು ಹಾಕಿಸಬಹುದು....ನೀವು ಚೆನ್ನಾಗಿ ಸಂಸಾರ ಮಾಡಿ ಕೊಂಡಿರೋ ದಂಪತಿಗಳು...." ಎಂದು ನನ್ನ ಮೇಲ್ಲೇ ಕಳ್ಳತನವನ್ನೂ ಹೊರಿಸಿದ. ನನ್ನ ಮಾವನ ಮಾವ ಕದ್ದು ತನ್ನ ಅಳಿಯನಿಗೆ ಕೊಟ್ಟಿದ್ದನ್ನು ಆತ ಮತ್ತೆ ತನ್ನ ಅಳಿಯನಾದ ನನಗೆ ಕೊಟ್ಟ. ಈ ಕೊಡೆಯ ಇತಿಹಾಸ ನನಗೆ ತಲೆ ತಗ್ಗಿಸುವಂತೆ ಮಾಡಿತು. ನಂಬದೆ ಇರೋಹಾಗೇ ಇಲ್ಲ ಎದುರಿಗೆ ಕೆತ್ತಿದ ಬರಹ ಇದೆ. ಕೋದಂಡ ಹೇಳಿದ "....ನಾನೇನೂ ರಂಪ ಮಾಡುವ ಮೂರ್ಖನಲ್ಲ....ಇದನ್ನೆ ೧೪ ರೂ.ಗೆ ರಿಪೇರಿ ಮಾಡಿಸಿ ನನ್ನದಾಗಿ ನೀವು ಉಪಯೋಗಿಸಿ....ನನಗೆ ಕೂಲಿ ನಿಮಗೆ ಛತ್ರಿ ಎರಡೂ ಆಗತ್ತೆ...." ಎಂದು ಸೂಚಿಸಿದ. ನಾನೂ—ಮೀನೂ ಮುಖ ಮುಖ ನೋಡಿ ಕೊಂಡೆವು—ಅವನಾಗಲೇ ರಿಪೇರಿ ಪ್ರಾರಂಭಿಸಿದ್ದ. ಮುಕ್ಕಾಲು ತಾಸಿನಲ್ಲಿ ಕೊಡೆ ರಿಪೇರಿ ಮುಗಿಸಿದ. ಧರ್ಮಕ್ಕೆ ಕೊಟ್ಟವನಂತೆ ಕೊಡೆಕೊಟ್ಟ—ಕದ್ದ ಮಾಲು ಕೊಟ್ಟಹಾಗೆ ಹಣ ಕೊಟ್ಟೆ. ನೆನಪಿರಲಿ ಬರ್‍ತೀನೆ....ಕೊಡೆ ಹುಶಾರಿಗಿಟ್ಟಕೊಳ್ಳಿ...." ಎಂದು ಜೋಬಿಗೆ ದುಡ್ಡು ಬಿಟ್ಟು ಹೊರಬಿದ್ದ. ಅವನು ಹೋದ ಮೇಲೆ ನಾನು ಮೀನಾಕ್ಷಿ ಇಬ್ಬರು ಕಷ್ಟಪಟ್ಟು ಎಷ್ಟು ಹುಡಿಕಿದರೂ....ಕುಣಿಗಲ್ಲು ಕೋದಂಡರಾಮು ವಿನ ಹೆಸರು ಕೆತ್ತಿದ ಕಡ್ಡಿ ಅದರಲ್ಲಿ ಇರಲೇ ಇಲ್ಲ.

ಅವತ್ತಿನ ಮಳೆ ಹೇಳತೀರದು—ವರಾಂಡಾದಲ್ಲಿ ನಾನು—ಮೀನೂ—ಮೀನೂ ಅಣ್ಣ....ಮೀನೂ ಅತ್ತಿಗೆ—ಎಲ್ಲಾ ಕೂತಿದ್ದೆವು. ಹರಟೆ ಸಾಗಿತ್ತು—ಹಾಗೇ ಮಾತಿಗೆ ಬಂದು ಮೀನೂ ಅಣ್ಣ ಕೊಡೆ ರಿಪೇರಿ ಮಾಡಿಸಿದ್ದ ಕತೆ ಹೇಳಿದ—ಕೋದಂಡ ನೆಂಬ ರಿಪೇರಿಯವ ಅವನ ಕೊಡೆಯ ಇತಿಹಾಸಹೇಳಿ ೧೫ ರೂ.ಗೆ ಕೊಡೆ ಸರಿಮಾಡಿದ್ದು ಹೇಳಿದ....ಆಗ ಹೊಳೆಯಿತು ಅವನ ರಿಪೇರಿ ಗುಟ್ಟು ಆ ಕೋದಂಡನ ಕಿಲಾಡಿವಿದ್ಯೆ—. ಆ ಹೆಸರು ಕೆತ್ತಿದ ಕೊಡೆಕಡ್ಡಿ ಅವನ ಬಳಿಯೇ ಇದ್ದು ಎಲ್ಲೆಲ್ಲೂ ಅದನ್ನ ತೋರಿಸಿ ಎಲ್ಲಾ ಕೊಡೆ ಅವರಜ್ಜನದೇ ಎಂದು ಹೇಳುತ್ತಿದ್ದುದು.

—ದಾಶರಥಿ ದೀಕ್ಷಿತ್.

ಶ್ರೀರಂಗಪಟ್ಟಣ

"ಬೆಳಗ್ಗೆ, ಅಷ್ಟು ಹೊತ್ತಿಗೇನೇ ಹೊರಟುಬಿಡೋಣ" ಅಂದಳು, ಹಿಂದಿನ ರಾತ್ರಿ. ಮೂರು ತಿಂಗಳಿಂದಲೂ ನಾವು ಮೆಲುಕು ಹಾಕುತ್ತಿದ್ದ ಪ್ಲಾನು, ಶ್ರೀರಂಗ ಪಟ್ಟಣಕ್ಕೆ ಹೋಗಿ, ತಮಾಷೆಯಾಗಿ ಒಂದು ದಿನ ಕಳೆದು, ಹಾಳು ಸಂಸಾರ ತಾಪ ತ್ರಯ ಒಂದು ದಿನದ ಮಟ್ಟಿಗೆ ಮರೆತು, ದರಿಯಾದವಲತ್ತು ಕಾವೇರೀ ತೀರ ಎಲ್ಲ ನೋಡಿಕೊಂಡು ಹಾಯಾಗಿ ಮನೆಗೆ ಬರೋಣ, ಅನ್ನೋದು. "ಒಂದಿಷ್ಟು ಕಾಫಿ ಬಸಿದುಕೊಂಡು ಉಪ್ಪಿಟ್ಟು ತಿಂದು ಹೊರಟೇಬಿಡೋಣ" ಎಂದು ನಾನೂ ಹೇಳಿದೆ. "ತಂಪು ಹೊತ್ತಿನಲ್ಲೇ ಹೋದರೆ ಒಳ್ಳೆಯದು, ಮಕ್ಕಳಿಗೂ ಮೈಗೆ ಶಾಖ ತಟ್ಟುವುದಿಲ್ಲ, ಬಸ್ ಸ್ಟಾಂಡಿಗೆ ಹೋದರೆ ಸಾಕು, ಗಂಟೆಗೆ ನಾಲ್ಕು ಬಸ್ಸು ಸಿಕ್ಕುತ್ತೆ" ಎಂದೆ.

ನಾಲ್ಕುಗಂಟೆಗೆ ನನ್ನನ್ನೆಬ್ಬಿಸಿದಳು. "ಥತ್! ಇಷ್ಟು ಬೇಗ ಯಾಕೆ? ಐದು ಐದೂವರೆಗೆ ಏಳು ಸಾಕು" ಎಂದು ಮತ್ತೆ ಮಲಗಿದೆ. ಸರಿಯಾಗಿ ಆರೂವರೆಗೆ ಹಾಲಿನವನು ಬಂದು ಕೂಗಿದಾಗ, ಎಚ್ಚರವಾಯಿತು. ಏಳೂಮುಕ್ಕಾಲಿಗೆ ಉಪ್ಪಿಟ್ಟು ಕಾಫಿ ಸಿದ್ಧವಾಯಿತು. ಮನೆಯನ್ನೆಲ್ಲ ಸಾರಿಸಿ ಗುಡಿಸದೆ, ಬಾಗಿಲಲ್ಲಿ ರಂಗೋಲಿ ಇಡದೆ, ಹೋದರೆ, ಲಕ್ಷಣವಲ್ಲ, ಅಂತ ಅವಳು ಅದನ್ನು ಮಾಡುತ್ತಿದ್ದಾಗ, ನಾನು ಮಕ್ಕಳಿಗೆಲ್ಲ ತಿಂಡಿಕೊಟ್ಟು, ತಟ್ಟೆ ಪಾತ್ರೆ ಎಲ್ಲ ತೊಳೆದಿರಿಸಿದೆ. ಒಂಬತ್ತೂಕಾಲಾಯಿತು. ನನ್ನ ಮೂಗು ಕೊಂಚ ಸೋರುವುದಕ್ಕೆ ಷುರು. ಹೊಳೆ ಸ್ನಾನ ಮಾಡಬಹುದೋ ಬೇಡವೋ ಎಂದು ಹತ್ತುಗಂಟೆತನಕ ಚರ್ಚೆಮಾಡಿ, ಬೇಡ, ಎಂಬ ನಿರ್ಧಾರಕ್ಕೆ ಬಂದು, ಮನೆಯಲ್ಲೇ ಎಲ್ಲರೂ ಸ್ನಾನಮಾಡುವುದು, ಅದೇ ಸರಿ, ಹೋದಕಡೆ ತಂಟೆ ತಕರಾರು, ಎಂದು ನಿಶ್ಚಯಿಸಿ, ನೀರು ಕಾಯಿಸಿ, ಸ್ನಾನ ಮಾಡಿದೆ. ಅವಳ ಸ್ನಾನ ಮುಗಿಯುವುದರೊಳಗಾಗಿ ಹನ್ನೊಂದೂವರೆ. ಮಕ್ಕಳಿಗೆಲ್ಲ ನಾನೇ ಮೈ ತೊಳೆದೆ. ಹನ್ನೆರಡು.

ಹೊಟ್ಟೆ ತಾಳ ಬಿರುಸಾಯಿತು. ಉಪ್ಪಿಟ್ಟು ಯಾವ ಮೂಲೆಗೆ? ಅಡಿಗೆ ಊಟ ಮುಗಿಸಿಯೇ ಹೊರಡೋದು, ಹೋದಕಡೆ ಹಸಿವು ಹಸಿವು ಅಂತ ಸಿಕ್ಕಿದ್ದನ್ನೆಲ್ಲ ತಿನ್ನುವುದು ಮಕ್ಕಳ ಆರೋಗ್ಯಕ್ಕೆ ಕೇಡು, ಎಂದುಕೊಂಡೆವು. ಎರಡೂವರೆಗೆ ಅಡಿಗೆ ಊಟ ಮುಗಿಯಿತು. ಮೂರೂಕಾಲಿಗೆ ಪಾತ್ರೆ ಪದಾರ್ಥ ತೊಳೆದಿರಿಸಿದೆವು, ಇಬ್ಬರೂ ಸೇರಿ.

ಡ್ರೆಸ್‌ಗಿಸ್ ಮಾಡಿಕೊಂಡು, ನಾಲ್ಕಕ್ಕೆ ಸಿದ್ಧವಾದೆವು. ಮಕ್ಕಳನ್ನೆಲ್ಲ ಒಟ್ಟು ಗೂಡಿಸಿದೆವು. ನಮ್ಮ ಮನೆಯಲ್ಲಿ, ನಾನೂ ಸೇರಿ, ಐದಿವೆ, ಲೆಕ್ಕ ಮಾಡಿದಾಗ, ಇದ್ದದ್ದು ನನ್ನನ್ನು ಬಿಟ್ಟು, ನಾಲ್ಕೇ. ನಡುವಣ ನಾರಾಯಣ, ಪತ್ತೆಯೇ ಇಲ್ಲ. ಗಾಬರಿಯಿಂದ ಅಲ್ಲಿ ಇಲ್ಲಿ ಹುಡುಕಿ, ಅವನ ಸ್ನೇಹಿತರ ಮನೆಗೆಲ್ಲ ಹೋಗಿ ವಿಚಾರಿಸಿ, ಅವನು ಹೋಗುತ್ತಿದ್ದ ನರ್ಸರಿ ಶಾಲೆಗೆ ಸೈಕಲ್ ಸವಾರಿ ಹೋಗಿಬಂದೆ. ಆಗ ಗೊತ್ತಾಯಿತು, ಅವನು ಬಚ್ಚಲುಮನೆಯಲ್ಲಿ ನಿದ್ದೆಮಾಡುತ್ತಿದ್ದ, ಅನ್ನೋದು.

ಗಂಟೆ ನಾಲ್ಕೂವರೆ. ಟಾಂಗಾಗಾಡಿ ಸಿಕ್ಕಿ ಅದರಲ್ಲಿ ಎಲ್ಲರೂ ಹತ್ತಿ ಕೂತಾಗ, ಐದಕ್ಕೆ ಹತ್ತು ನಿಮಿಷ. ಆ ಕುದುರೆ, ಚೌಕ ಚೌಕದಲ್ಲೂ ಸರ್ಕಸ್ ನಡೆಸಿ, ತಾನು ನಿತ್ಯ ನಿಲ್ಲುವ ಸ್ಟಾಂಡುಕಡೆ ತಿರುಗಿ, ಅಲ್ಲಿಂದ ವಾಪಸ್ ಬಂದು, ಬಸ್‌ಸ್ಟಾಂಡಿಗೆ ಹೋದದ್ದು, ಐದೂವರೆ.

ಟಾಂಗಾದವನಿಗೆ ಕೂಲಿ ಕೊಡುವುದಕ್ಕೆ ಅಂತ ಕಿಸೆಯಲ್ಲಿ ಕೈ ಇಟ್ಟಾಗ ತಿಳಿಯಿತು, ಪರ್ಸ್ ಮನೆಯಲ್ಲೇ ಇದೆ, ಎಂಬುದು. ಅವರನ್ನೆಲ್ಲ ಬಸ್‌ಸ್ಟಾಂಡ್‌ನಲ್ಲೇ ನಿಲ್ಲಿಸಿ, ನಾನು ಅದೇ ಟಾಂಗಾದಲ್ಲೇ ಮನೆಗೆ ಹೋದೆ. ಮನೆ ಬಾಗಿಲಲ್ಲಿ ತಿಳಿಯಿತು, ಬೀಗದ ಕೈ ಅವಳ ಹತ್ತಿರ, ಎಂಬುದು. ಸರಿ. ಅದೇ ಗಾಡೀಲೇ ಬಸ್ ಸ್ಟಾಂಡಿಗೆ ಹೋಗಿ, ಅವಳ ಹತ್ತಿರದಿಂದ ಅದನ್ನು ಸಂಪಾದಿಸಿ, ಮನೆಗೆ ಹಿಂತಿರುಗಿ ಪರ್ಸ್ ಸಂಪಾದಿಸಿ, ಮತ್ತೆ ಮನೆಗೆ ಬೀಗಹಾಕಿ, ಅದೇ ಗಾಡಿಯಲ್ಲೇ ಬಸ್‌ಸ್ಟಾಂಡಿಗೆ ಹೋದೆ. ಗಂಟೆ ಆರೂವರೆ.

ಪರ್ಸ್‌ನಲ್ಲಿದ್ದದ್ದು ನಾಲ್ಕೂವರೆ ರೂಪಾಯಿ. ಟಾಂಗಾದವನಿಗೆ ಕೂಲಿ ಐದು ಬಾರಿಗೂ ಸೇರಿ ಮೂರುಮುಕ್ಕಾಲು ರೂಪಾಯಿ ತೆತ್ತೆ, ಇಪ್ಪತ್ತು ನಿಮಿಷದ ಜಗಳದ ನಂತರ. ಇನ್ನು ಉಳಿದಿದ್ದದ್ದು ಹನ್ನೆರಡಾಣೆ. ಅದನ್ನ ಕೊಟ್ಟರೆ, ಎಲ್ಲರನ್ನೂ ಕೂರಿಸಿಕೊಂಡು ಮನೆ ತನಕ ಬಿಡುತ್ತೇನೆ ಅಂತ ಟಾಂಗಾದವನು ಒಪ್ಪಿದ್ದು ನಮ್ಮ ಪುಣ್ಯ.

ಏಳೂಕಾಲಿಗೆ ಮನೆ ಸೇರಿದೆವು.

—ಪಾಟೀಲ.

— o —

ಮಹಿಳಾಮಣಿಗಳ ದೋಷವು ಬಹಳ;
ಮಹನೀಯರಿಗೋ? ಎರಡೇ, ಎರಡು:—
ಹೇಳುವುದೆಲ್ಲವು ಮೊದಲನೆ ದೋಷ
ಮಾಡುವುದೆಲ್ಲವು ಎರಡನೆ ದೋಷ.

—ಸುಶೀಲ.

ಕವಿಗಳಪಾಡು ನಿಜಕ್ಕೂ ಕಷ್ಟ

ಶ್ರೀಪತಿ ಕವಿತೆ ಬರೆಯುತ್ತಿದ್ದರೂ, ನಾವು ಅವನನ್ನು ಗೌರವಿಸುತ್ತಿದ್ದೆವು. ಪಾಪ, ಅದೊಂದನ್ನು ಬಿಟ್ಟು, ಉಳಿದ ಬಾಬತುಗಳಲ್ಲೆಲ್ಲ ಅವನು ಗಣ್ಯ. ನಮ್ಮೂರು ಫುಟ್‌ಬಾಲ್ ಟೀಮಿಗೆ ಅವನೇ ಫುಲ್‌ಬ್ಯಾಕ್. ತಲೆ ಕಾಲು ಎರಡರಿಂದಲೂ ಅವನು ಅರಿ ಸಮೂಹದವರು ಒದ್ದು ತಂದ ಚೆಂಡುಗಳನ್ನೆಲ್ಲ ಹಿಂದಕ್ಕಟ್ಟುತ್ತಿದ್ದ.

ಆದರೆ, ಹಾಳು, ಆ ಕಾವ್ಯ ಪ್ರತಿಭೆ ಅವನ ಜನ್ಮಕ್ಕೇ ಅಂಟಿಕೊಂಡು ಬಿಟ್ಟಿತ್ತು. ಚುಕ್ಕಿ, ಹಕ್ಕಿ, ಕೋಗಿಲೆ ಕಾಜಾಣ, ವಿಶ್ವಶಾಂತಿ, ರಕ್ತರುದ್ರಭದ್ರತೆ, ಎಂದೆಲ್ಲ ಅವನು ಬಾಯಲ್ಲೇ ಉಚ್ಚರಿಸಿ, ಪಂಕ್ತಿಗಳಾಗಿ ಜೋಡಿಸಿ, ದೀನದಲಿತರಾದಿಯಾಗಿ ಮೀನ ಹಿಡಿವ ಮೂಕರು, ಎಂದು ರಚಿಸಿ, ಸಂಜೆಹೊತ್ತಿಗೆ ಎರಡು ಪುಟ ತುಂಬಿ ಸುತ್ತಿದ್ದ. ಸೊಪ್ಪು ಸೊದೆ, ಬೇರು ನಾರು, ಬೆಳದಿಂಗಳು, ಕಾಯಿ ಹಣ್ಣು, ಕೆನ್ನೆ ಕಣ್ಣು ಎಂದರೆ ಅವನಿಗೆ ಊಟವೂ ಬೇಡ, ಆಟವೂ ಬೇಡ, ತೇಲುಗಣ್ಣು ಮೇಲು ಗಣ್ಣಾಗಿ ಕುಳಿತೇ ಬಿಡುವನು, ಊರಾಚೆಯ ಅರಳೀಕಟ್ಟೆ ಮೇಲೆ.

ಎರಡು ವರ್ಷವಾಯಿತು, ಅವನಿಗೆ ಮದುವೆಯಾಗಿ. ಅವನ ಕೈಹಿಡಿದವಳು ಬಲು ಜಾಣೆ ಹುಡುಗಿ. ಶ್ರೀಪತಿಯನ್ನು ತಿದ್ದಿ, ಸದ್ಗೃಹಸ್ಥನನ್ನಾಗಿ ಮಾಡಲು ಅವಳು ನಿರಂತರ ಶ್ರಮಿಸಿದಳು. ತನ್ನ ತಂದೆಯ ಸ್ನೇಹಿತರಾದ ಒಬ್ಬರು ಉನ್ನತಾಧಿ ಕಾರಿಯ ನೆರವಿನಿಂದ, ಅವಳು ಶ್ರೀಪತಿಗೆ ಬಟ್ಟೆ ಲೈಸನ್ಸನ್ನು ! ಕೊಡಿಸಿದಳು. ಶ್ರೀಪತಿ ವರ್ತಕನಾದ; ಜೊತೆಗೆ, ಊರಿನ ಫುಟ್‌ಬಾಲ್ ಟೀಮಿನ ಕ್ಯಾಪ್ಟನಾಗಿ, ಸುತ್ತ ಮೂವತ್ತು ಮೈಲಿಯಷ್ಟು ಪ್ರದೇಶದಲ್ಲಿದ್ದ ಬೆಳ್ಳಿಕಪ್ಪುಗಳನ್ನೆಲ್ಲ ಹೊಡೆದ.

ಆದರೂ, ಹುಡುಗಿಗೆ ಭಯ. ಎಲ್ಲಿ ಕಾವ್ಯದ ಖಾಯಿಲೆ ಮತ್ತೆ ಕೆರಳಿ ಬಿಡುತ್ತದೋ, ಎಂದು. ಸೂರ್ಯೋದಯವನ್ನು ಅವನು ಎಂದೂ ಕಾಣದಿರುವಂತೆ, ಅವಳು ಅವನನ್ನು ಎಂಟುಗಂಟೆಗೆ ಮುಂಚೆ ಎಬ್ಬಿಸುತ್ತಿರಲಿಲ್ಲ. ಅಂಗಳದಲ್ಲಿ ಹೂವಿನ ಗಿಡಗಳೊಂದನ್ನೂ ನೆಡಲಿಲ್ಲ. "ಆ ಕಾಗಿ ಯಾಕಾಗಿ ಕುಣಿಯೋದು ಬೇಕಾಗಿ....," ಎಂದೆಲ್ಲ ಎಲ್ಲಿ ಒದರಿಬಿಡುತ್ತಾನೋ ಎಂಬ ಹೆದರಿಕೆಯಿಂದ ಅವಳು ಮನೆ ಸುತ್ತ ಕಾವಲಿದ್ದು ಕಾಗೆಗಳನ್ನೆಲ್ಲ ಕಲ್ಲು ಹೊಡೆದು ಓಡಿಸುತ್ತಿದ್ದಳು. ಮನೆ ಮಗುವನ್ನೂ ಕೂಡ ಸದಾ ಅಳಿಸುತ್ತಿದ್ದಳು; ಅದರ ಮುಖವನ್ನು ಎಂದೂ ತೊಳೆಯ

ಲಿಲ್ಲ. ಎಲ್ಲಿ ತನ್ನ ಗಂಡ "ಕೂಸೇ ಕೂಸೇ ಕಮಲದ ಹೂವೆ!" ಎಂದು ಕಾವ್ಯ ಕಟ್ಟುತ್ತಾನೋ ಎಂಬ ಭಯದಿಂದ. ಬೆಳದಿಂಗಳ ರಾತ್ರಿಗಳಲ್ಲೆಲ್ಲ ಅವನನ್ನು, ತನಗೆ ಜ್ವರ ಎಂಬ ನೆಪದಿಂದ, ಮನೆ ಒಳಗಡೆಯೇ, ಕೂರಿಸಿ ಕೊಂಡಿರುವಳು, ಕಿಟಕಿ ಮುಚ್ಚಿ.

ಒಂದು ದಿನ, ಮನೆಗೆ ಬಂದವರು ಯಾರೋ, ಅಪ್ಪಿ ತಪ್ಪಿ, ಊಟ ಮಾಡುತ್ತಿರುವಾಗ ಕೋಗಿಲೆ ಎಂದು ಹೇಳಿಬಿಟ್ಟರಂತೆ. ಅದನ್ನು ಕೇಳಿ ಶ್ರೀಪತಿ ತೇಲುಗಣ್ಣು ಮಾಡಿ, ಕಿವಿ ನೀಡಿ, ಪೆನ್‌ಸಿಲ್ ಹುಡುಕಿದನಂತೆ. ಆಗ ಅವಳು ನರಕ್ಕನೆ ಬಿಸಿಬಿಸಿ ಸಾರು ಒಂದು ಸೌಟು ಆತನ ಅಂಗೈಗೆ ಹುಯ್ದು, ಮಾತನ್ನು ನಿಲ್ಲಿಸದೆ ಹೋಗದಿದ್ದರೆ, ಶ್ರೀಪತಿಯ ಕಾವ್ಯಜ್ವರ ಮರಕಳಿಸಿ, ಅನಾಹುತವಾಗುತ್ತಿತ್ತು. "ಕೋಗಿಲೆ ಕೂಜನ, ಕೇಳುವ ಈ ಜನ," ಎಂದು ಆಗಲೇ ಅವನು ಒಂದು ಪಂಕ್ತಿಯನ್ನು ನೇಯ್ದು ಬಿಟ್ಟಿದ್ದ. ಸದ್ಯಃ ಅವತ್ತು ಅವನು ಉಳಿದುಕೊಂಡ.

ಆದರೆ, ಪ್ರತಿಕ್ಷಣವೂ ಅವನನ್ನು ಜೋಪಾನವಾಗಿ ನೋಡಿಕೊಳ್ಳುವುದೆಂದರೆ ಆಗದಮಾತು. ಕಾಮನಬಿಲ್ಲು, ತುಂತುರು ಮಳೆ, ವಿದ್ಯುಲ್ಲತೆ, ಗುಲಾಬಿ ಹೂವು—ಒಂದನ್ನೂ ಅವನು ಕಾಣದ ಹಾಗೆ ಕಣ್ಣನ್ನು ಕುಕ್ಕುವುದು ಸಾಧ್ಯವೆ?

ಅಂಗಡಿಯಲ್ಲೊಂದು ದಿನ ಅವನು ಒಂದು ಥಾನ್ ಮಿಲ್ಲು ಮಲ್ಲನ್ನು ಅಳೆಯುತ್ತಿದ್ದಾಗ, "ಬಿಳಿಯ ಮೋಡದ, ಕೆನೆಯ ನೊಸರಿನ, ಹಾಲು ಚೆಲ್ಲಿದ ಶಿಶಿರ ರಾತ್ರಿಯ" ನೆನಪಾಯಿತು, ಅವನಿಗೆ. ಆದ್ದರಿಂದ, ಮಲ್ಲಿಗೆ ಬಿಲ್ಲು ಕೊಟ್ಟಾಗ, ಮಲ್ಲಿಗೆ ನೆನಪಾಗಿ, ಒಂದಕ್ಕೆರಡು ಡಬ್ಬಲ್ ಬೆಲೆ ಚಾರ್ಜುಮಾಡಿದ. ಕವಿ, ಪಾಪ, ಸಾಹಿತ್ಯಸೇವಕ, ಕನ್ನಡಮ್ಮನ ಡಿಂಗರಿಗ ಎಂದು ಎಷ್ಟು ಹೇಳಿಕೊಂಡರೂ, ಬರೆ ಎಳೆದೇ ಬಿಟ್ಟರು. ಲೈಸನ್ಸು ಕಿತ್ತುಕೊಂಡರು. ಜೈಲು ತಪ್ಪಿದ್ದು, ಮಾವನ ಮೆಹನತ್ತಿಂದ.

ಇನ್ನು ಶ್ರೀಪತಿಗೆ ಉಳಿದದ್ದು ಒಂದೇ ಹವ್ಯಾಸ. ಅದನ್ನೂ ಅವನು ತೊರೆಯಬೇಕಾಗಿ ಬಂತು, ಕವನದ ಚಾಳಿಯಿಂದ. ನಮ್ಮೂರ ಟೀಮಿಗೂ ಡೈನಾಮೋಸಿಗೂ ಆಟ ನಡೆಯಿತಲ್ಲಾ, ನಾಲ್ಕುಬಾರಿ ಡ್ರಾ ಆಗಿ, ಐದನೆಯ ಸಲ ನಾವು ಸೋತೆವಲ್ಲಾ, ಆರು ಗೋಲು ಹೊಡೆಸಿಕೊಂಡು, ಆ ಆರು ಗೋಲಿಗೂ ಶ್ರೀಪತಿಯೇ ಕಾರಣ. ನಾಲ್ಕು ಡ್ರಾಗಳಿಗೂ ಅವನೇ ಮೂಲ.

ಅದು ಹೇಗೆ? ಒಬ್ಬನ ಅಸಡ್ಡೆಯಿಂದ ಇಷ್ಟೊಂದು ಅನಾಹುತವಾಗುತ್ತದೆಯೆ ಎಂದು ಅನುಮಾನಿಸುತ್ತಿದೀರಿ, ಅಲ್ಲವೆ?

ನಿಜ! ಆಯಿತು! ಎಲ್ಲವೂ ಶ್ರೀಪತಿಯ ಅಸಡ್ಡೆಯಿಂದಲೇ.

ಇನ್ನೇನೂ ಇಲ್ಲ. ಶ್ರೀಪತಿ, ಫುಲ್‌ಬ್ಯಾಕ್ ತಾನೆ ? ಅರ್ಧ ಗಂಟೆ ಆಕಡೆ ಅರ್ಧ ಗಂಟೆ ಈ ಕಡೆ, ತಾನೆ ? ಆ ಫುಲ್‌ಬ್ಯಾಕ್ ತಾಣದಲ್ಲಿ, ಆಕಡೇನೂ ಈ ಕಡೇನೂ, ನಮ್ಮೂರು ಫೀಲ್ಡಲ್ಲಿ ಒಂದು ಸಣ್ಣ ಗಿಡ ಬೆಳೆದಿತ್ತು....ಹಳದಿ ಹೂವು ಬಿಟ್ಟಿತ್ತು....ಚಿಕ್ಕ ಹೂವು, ಕೆಂಪುಚುಕ್ಕಿ ನಾಲ್ಕು, ಒಂದೊಂದೆಸಳಿಗೆ ಒಂದೊಂದರಂತೆ ಮನ ಮೋಹಕ ವಾಗಿತ್ತಂತೆ. ಶ್ರೀಪತಿಯ ಮನಸ್ಸನ್ನು ಮೋಹಿಸಿತು.


ಆಟ ಪ್ರಾರಂಭವಾಗುವ ಮೊದಲು, ತನ್ನ ಸ್ಥಾನದಲ್ಲಿ ಹೋಗಿ ನಿಂತಾಗ, ಆ ಕಡೇನೂ ಈ ಕಡೇನೂ ಅವನು ಆ ಗಿಡವನ್ನು, ಆ ಹೂವುಗಳನ್ನು ನೋಡಿ ಬಿಟ್ಟನಂತೆ. "ಚಿಕ್ಕ ಚಿಕ್ಕ ಚುಕ್ಕಿ ಹಣೇಮೇಲಿ ಕುಕ್ಕಿ" ಎಂಬ ಪಂಕ್ತೀನೂ ಸಿದ್ಧ ವಾಯಿತಂತೆ. ಆಟ ಪ್ರಾರಂಭವಾಯಿತಂತೆ. ಎಲ್ಲಿ ತನ್ನ ಓಡಾಟದಲ್ಲಿ ಆ ಹೂವು ಗಳನ್ನು ತುಳಿದು ಬಿಡುತ್ತೇನೋ, ಎಂಬ ಭಯ, ಶ್ರೀಪತಿಗೆ. ಅದರಿಂದಾಗಿ, ಅವನಿಗೆ ದೊಡ್ಡ ಕಾಲುತೊಡಕಾಗಿ, ಅವನಿಗೆ ಕಾಲು ಬೀಸುವುದೇ ತಾಪತ್ರಯವಾಗಿ ನಾಲ್ಕು ಬಾರಿ ಡ್ರಾ, ಕಡೆಯಸಲ, ಆರು ಗೋಲು ಬಿತ್ತು.


ಅಂದಿನಿಂದ ಅವನಿಗೆ ಆಟದ ಮೈದಾನದಿಂದ ಉಚ್ಚಾಟನೆ.

ಈಗ, ಶ್ರೀಪತಿ ತುಂಬಾ ಶೋಚನೀಯ ಸ್ಥಿತಿಯಲ್ಲಿದಾನೆ. ಕವನ ಬರೆಯಲು ಆವಳು ಒಪ್ಪುತ್ತಿಲ್ಲ; ಬರೆಯದೆ ಇದ್ದರೆ, ಬೇರೆ ಕೆಲಸವಿಲ್ಲ. ಕವಿಗಳ ಪಾಡು ನಿಜಕ್ಕೂ ಕಷ್ಟ.

—ಪಾಟೀ.

—o—





ಬರೆಯುವುದು, ಓದುವುದು, ಎಡದಿಂದ ಬಲಕೆ;
ಛಲಕೆ ಬಲದಿಂದ ಬಿಟ್ಟೊಂದನ್ನು ಒಂದು
ಏಕೆ ಅಚ್ಚಿಸಬಾರದು? ಕವನದಲಿ ವಕ್ರ
. ಚಕ್ರ ಲೈನಿನ ಹೆಸರು; ಕ್ರಾಂತಿ, ಇವೆ ಎಷ್ಟೊ
ಎಡದಿಂದ ಬಲಕೆ, ಮತ್ತೆ ನೋಟವನೆತ್ತಿ
! ಮತ್ತೆ ಎಡಕೆ, ಎತ್ತಿ ಅಂಚಿಗೆ ಇತ್ತ
ಇದನು ತಪ್ಪಿಸೆ ನಾನು ಈ ರೀತಿ ಬರೆದೆ;
ಬರದೆ ನಾವ್ ಏಕೆ, ಎನಿಸುತಿದೆ ಸರಿ ಇದೇ
ಹಳೆಯ ಕಂದಾಚಾರದೊತ್ತಿನಲಿ ಸಿಲುಕಿ
ತಿಣಿಕಿ ನಾವ್ ಎನುತ ಶಾಶ್ವತವು ನಿತ್ಯ ಅದೇ
ಹೊಸ ರೀತಿ ಹೊಸ ಪಂಕ್ತಿ ಪ್ರಿಂಟಿಸಲು ಭಯವೆ?
? ನಯವೆ ಇನ್ನೆ ಮಗೆ ಕೊಳೆಯುವುದೆ ಹಳೆತಲ್ಲೆ
ಗದ್ಯವನು—ಅವರಿಷ್ಟ! ಗೋಜು ಬೇಡಿನ್ನು!
"ಚೆನ್ನ ರೀತಿ ಹೊಸ ಪದ್ಯಕೀ" ಮತ ನಮ್ಮ.

—ನಾ. ಕ.

—O—

ದುಸ್ತರ ನದಿ, ಆ ಹೇಮಾವತಿಯಲಿ
ಬೆಸ್ತರ ತಿಮ್ಮನ ದೋಣಿಯು ಮಗುಚಿತು;
ತಿಮ್ಮನು ಮುಳುಗಿದ, ಕಮ್ಮನೆ ತಳಕೆ,
ಗುಳು ಗುಳು ಗುಳು ಗುಳು ಗುಳ್ಳೆಗಳೆದ್ದುವು:

o
o
o
o
o
o
o
o

ತಿಮ್ಮನ ಸುಳಿವೇ ಸಿಗಲಿಲ್ಲ.

ನಾನು ನೋಡಿದ ಕಥೆ

ಮೊನ್ನೆ ನಾನು ನನ್ನ ತಮ್ಮನ ಮದುವೆಗೆ ಒಂದು ಸಣ್ಣ ಊರಿಗೆ ಹೋಗಿದ್ದೆ. ಸಣ್ಣದು ಅಂದ್ರೆ ತೀರ ಸಣ್ಣದು, ಮೂರೇ ಮೂರು ಸಿನಿಮ ಮನೆಗಳು.

ಒಂದೇ ದಿನದ ಮದುವೆ; ಮರುದಿನವೇ ಹೊರಡಬೇಕು; ಲೀವು ಬೇರೆ ಇಲ್ಲ. ಮೂರು ಸಿನಿಮಗಳನ್ನೂ ಅದೇ ರಾತ್ರಿ ಹೋಗಿ ನೋಡಿಬಿಡೋಣ ಎಂದು ತೀರ್ಮಾನಿಸಿದೆ. ಎಲ್ಲೆಲ್ಲಿ ಯಾವ ಯಾವ ಚಿತ್ರ ಎಂಬುದು ಜ್ಞಾಪಕವಿಲ್ಲ; ಒಂದರಲ್ಲಿ ಹಿಂದಿ ಮತ್ತೊಂದರಲ್ಲಿ ತಮಿಳು, ಉಳಿದದ್ದರಲ್ಲಿ ತೆಲುಗು, ಅಷ್ಟುಮಾತ್ರ ನೆನಪು.

ಹೋದೆ; ಕೂತೆ. ಹಿಂದಿ ಚಿತ್ರ. ಉದ್ಯಾನವನ, ಕಥಾನಾಯಕಿ ಜಿಂಕೆ ಮರಿಯೊಂದಿಗೆ ಕುಣಿದು ಹಾಡಿದಳು. ಅವಳ ಅಪ್ಪ ಬಂದು ಬೈದು ಮನೆಗೆ ಕರೆದುಕೊಂಡು ಹೋಗಿ, ಮದುವೆ ಗೊತ್ತುಮಾಡುವ ಘಟ್ಟಕ್ಕೆ ಬಂದ, ಅಮ್ಮನೂ ದನಿ ಕೂಡಿಸಿದಳು, ಪ್ರತಿನಾಯಕ ಬಂದ, ಅವಳು ಒಲ್ಲೆ ಅಂದಳು, ಕತ್ತಲು ಕೋಣೆಯಲ್ಲಿ ಅವಳನ್ನು ಕೂಡಿಟ್ಟರು, ಬೆಳದಿಂಗಳಲ್ಲಿ ನಾಯಕ ಬಂದ, ಕುದುರೆಮೇಲೆ, ಹಗ್ಗದ ಏಣಿ ಮೂಲಕ ಹತ್ತಿದ, ಕೆಳಕ್ಕಿಳಿಸಿದ ನಾಯಕಿಯನ್ನ....


ಆಗ, ನಾನು ಎದ್ದು, ತಮಿಳು ಚಿತ್ರಕ್ಕೆ ಹೋದೆ. ಅಲ್ಲಿ, ಆಗಲೇ, ಅವರಿಬ್ಬರೂ ಒಂದು ಕಾಡಿನ ನಡುವಣ ಗುಡಿಸಿಲೊಳಕ್ಕೆ ಹೋಗಿಬಿಟ್ಟಿದ್ದರು. ಅವರನ್ನು ಅಟ್ಟಿಸಿಕೊಂಡು ಬಂದ ಪ್ರತಿನಾಯಕನನ್ನು, ನಾಯಕ (ಅದೇ, ಆ ಕಳ್ಳರ ಗುಂಪಿನ ರಾಜ) ಹಿಡಿದುಕಟ್ಟಿ ಕಾರಾಗೃಹದಲ್ಲಿರಿಸಿ, ಮಂತ್ರ ಶಕ್ತಿಯಿಂದ ಹಾವಾಗಿ ರೂಪ ಬದಲಾಯಿಸಿ, ಬಿಲದೊಳಕ್ಕೆ ಸೇರಿಸಿದ್ದ. ಇದನ್ನು ಕಿಟಕಿಯಿಂದ ನೋಡಿದ ಕಥಾನಾಯಕಿ, ಬೇಸರದಿಂದ, ಹಾಡತೊಡಗಿದ್ದಳು. ಆ ದನಿಯನ್ನು, ಕಾರಲ್ಲಿ ಅದೇ ಮಾರ್ಗವಾಗಿ ಹೋಗುತ್ತಿದ್ದ ಅವಳ ತಂದೆ ಕೇಳುತ್ತಾನೆ. ಮಗಳ ದನಿಯನ್ನು ಗುರುತಿಸಿ ಆತ ಅಲ್ಲಿಗೆ ಧಾವಿಸುತ್ತಾನೆ. ತುಪಾಕಿ ಸಹಿತ ಬಂದ ಅವನಿಗೂ ಕಳ್ಳರ ಗುಂಪಿನ ಖಿಲ ಜನಕ್ಕೂ ಯುದ್ಧವಾಗುತ್ತದೆ. ತಂದೆ ಕೆಳಗೆ ಬಿದ್ದುದನ್ನು ನೋಡಿ ಮಗಳು ಕಿಟಕಿ ಕಂಬಿಕಿತ್ತು ಮೂರನೆಯ ಮಹಡಿಯಿಂದ ಧುಮುಕುತ್ತಾಳೆ. ಇಂಟರ್‌ವಲ್ ಪ್ರಾರಂಭವಾಯಿತು.

ಆಗ, ನಾನು ತೆಲುಗು ಚಿತ್ರದಕಡೆ ಹೊರಟೆ. ಪ್ರಚಾರದ ಸ್ಲೈಡುಗಳು ಮುಗಿಯುತ್ತಲೂ, ಅಲ್ಲಿಯ ಪ್ರದರ್ಶನ ಮುಂದುವರಿಯಿತು. ಕಥಾನಾಯಕಿ

ಯನ್ನೂ ಅವಳ ತಂದೆಯನ್ನೂ ಆಸ್ಪತ್ರೆಯಲ್ಲಿ ಪಕ್ಕಪಕ್ಕದ ಹಾಸಿಗೆಗಳಲ್ಲಿ ಮಲಗಿಸಿ, ವೈದ್ಯರು ತಲೆ ಅಲ್ಲಾಡಿಸುತ್ತಿದಾರೆ. ಪ್ರತಿನಾಯಕ ಹಾವಿನ ರೂಪದಿಂದ ಹೇಗೋ ಪಾರಾಗಿ, ಅಲ್ಲೇ ರಸ್ತೆಯಲ್ಲಿ ಬಿದ್ದಿದ್ದ ಖಾಲಿ ಕಾರಿನಲ್ಲಿ ಕೂತು ಬರುವಾಗ, ಹಠಾತ್ತನೆ ಕಳ್ಳರ ರಾಜನ ಮೈಮೇಲೆ ಕಾರನ್ನು ಹರಿಯ ಬಿಡುತ್ತಾನೆ. ಇದರಿಂದ ರೋಷಗೊಂಡ ಕಳ್ಳರು, ಸೊಗಸಾದ ಒಂದು ಜಾನಪದ ನೃತ್ಯದಿಂದ ಅವನ ಅಂತ್ಯ ಸಂಸ್ಕಾರ ಮಾಡುತ್ತಾರೆ. ಈ ಕಾರ್ ಅಪಘಾತಕ್ಕಾಗ, ಅವನನ್ನು ಕೋರ್ಟಿಗೆಳೆಯುತ್ತಾರೆ. ಅವನ ಪರ ವಾದಿಸಲು, ಅಷ್ಟರೊಳಗೆ ಹಾಸಿಗೆಯಿಂದೆದ್ದ ತಂದೆ, ವಕೀಲಿಯಾಗುತ್ತಾನೆ. ತನ್ನ ಪ್ರಿಯನಾದ ಕಳ್ಳರ ರಾಜ ಸತ್ತದ್ದನ್ನು ಕೇಳಿ ನಾಯಕಿ ಆಸ್ಪತ್ರೆಯಿಂದ ತಪ್ಪಿಸಿಕೊಂಡು ಓಡುತ್ತಾಳೆ. ದಾರಿಯಲ್ಲಿದ್ದ ದರಿಯನ್ನು ಕಾಣದೆ ೩೦೦ ಅಡಿ ಬಿದ್ದು ಹೊಳೆಯಲ್ಲಿ ತೇಲುತ್ತಾಳೆ.

ನಾನು ಎದ್ದೆ; ಹಿಂದಿ ಚಿತ್ರವೇ ಚೆನ್ನ ಅಂತ ಅಲ್ಲಿಗೆ ಹೋದೆ. ಅಲ್ಲಿ ಹೋದ ಕೂಡಲೇ, ನೋಡಿದೆ, ಬೆಸ್ತನೊಬ್ಬ ಕಥಾನಾಯಕಿಯನ್ನು ಹೊಳೆಯಿಂದ ಮೇಲಕ್ಕೆಳೆದದ್ದನ್ನು. ಅವಳನ್ನು ಅವನು ಹೆಗಲ ಮೇಲೆ ಹೇರಿಕೊಂಡು ಹೋಗುವಾಗ ಚಿತೆಯಮೇಲೆ ಕಣ್ಣುತೆರೆದ ಕಳ್ಳರರಾಜ, ಓಡಿಬಂದು, ಅವನನ್ನು ಹೊಡೆದು ಬೀಳಿಸಿ ಅವಳನ್ನು ತಾನೇ ಹೊತ್ತು ಊರಕಡೆಗೆ ಓಡುತ್ತಾನೆ. ಆಗ, ಕೋರ್ಟಿನ ಹೊರಕ್ಕೆ ಬರುತ್ತಿದ್ದ ಕಾರೊಂದು, (ಅದರಲ್ಲಿದ್ದವರು ಅವಳ ತಂದೆ ಮತ್ತು ಪ್ರತಿನಾಯಕ) ಅವರಿಬ್ಬರನ್ನೂ ಸಾಯಿಸುತ್ತದೆ. ತಂದೆಕೂಡ ಹರ ಹರ. ಕಾರು ಪುಡಿ ಪುಡಿ. ಪ್ರತಿನಾಯಕ ಒಬ್ಬ ಉಳಿದ. ಅವನು ತಕ್ಷಣವೇ ಪಿಸ್ತೂಲ್ ಹಾರಿಸಿ, ಆತ್ಮಹತ್ಯೆ ನಡೆಸುತ್ತಾನೆ.

—ರೇವಣ್ಣ.



"ಹಲ್ಲುಮಾತ್ರ ಕೀಳಬೇಡಿ, ಏನುಬೇಕಾದ್ರೂ ಮಾಡ್ರಿ"

ವಾತಾವರಣ ವಕ್ರೀ ಭವನ

(Atmospherical refraction
ಒಂದು ವಿಜ್ಞಾನ ಅಭಾವಗೀತೆ)

ಎಲೆ ಎಲೆ ವಕ್ರೀಭವನ
ನಿನಗಿದೋ ನನ್ನ ನಮ
ಸರ್ವಶಕ್ತ ನೀನು.
ಬಿ.ಎಸ್ಸಿ. ಫೇಲ್ ನಾನು-|ಪ|

ಮೂಡಿದನದೋ ಬಾಲರವಿ
ಇಲ್ಲ ಇಲ್ಲ ಎಲ್ಲ ಸುಳ್ಳು
ಇನ್ನೂ ಕೆಳಗಿರುವನು
ನೀನವನನು ಮೇಲಕೆತ್ತಿ
ಕಾಣುವಂತೆ ಮಾಡಿದೆ
ನೂರಾರು ಬಾಲಕರಿಗೆ
ಸೆಪ್ಟಂಬರ ತೋರಿದೆ-೧-

ಮುಳುಗಿದನದೊ ವೃದ್ಧರವಿ
ಇಲ್ಲ ಇಲ್ಲ ಎಲ್ಲ ಸುಳ್ಳು
ಆಗಲೆ ಮುಳುಗಿರುವನು
ನೀನವನನು ಹಿಂದಕೆಳೆದು
(೪೧) ನಾಲ್ಕು ಹತ್ತು ಒಂದುರೂಗೆ
ಚಕ್ರವನ್ನು ಹಾಕಿದೆ -೨-

ಕೆಂಪುದುಂಡು ಚಂಡುರವಿ
ನೀನವನನು ಮೇಲೆ ಒತ್ತಿ
ಕಿತ್ತಳೆಯನು ಮಾಡಿದೆ
ರಾಮಭಕ್ತ ಹನುಮನನಮುಖ
ಊದುವಂತೆ ಮಾಡಿದೆ-೩-

ಎಲೆ ಎಲೆ ವಕ್ರೀಭವನ
ನಿನ್ನಿಂದಲೆನಗೆ ವಪನ
ಸರ್ವಶಕ್ತ ನೀನು
ಬಿ.ಎಸ್ಸಿ. ಫೇಲ್ ನಾನು-೪-

ಆಧಾರ :—Due to atmospherical refraction sun is seen $4\frac{1}{2}$ minutes before actual sun rise and also after sun set he is seen for $4\frac{1}{2}$ minutes. On Sunrise and sunset sun's shape is elliptical due to atmospherical refraction.

(B.Sc. Student's note book)

ಆ ಕಾಲ ಇನ್ನೆಲ್ಲಿ ಬಂತು !

“ಕಾಲ ಕೆಟ್ಟುಹೋಯಿತು! ಕಾಲ ಕೆಟ್ಟುಹೋಯಿತು!” ಎಲ್ಲರ ಬಾಯಲ್ಲೂ ಇದೇ ಮಾತು ಈಗ. ಹಾಗಾದರೆ ಕಾಲ ಯಾವಾಗ ಒಳ್ಳೆಯದಾಗಿತ್ತು? ಈ ಪ್ರಶ್ನೆಗೆ ಒಬ್ಬೊಬ್ಬರು ಒಂದೊಂದು ವಿಧವಾಗಿ ಉತ್ತರ ಹೇಳುತ್ತಾರೆ. ಅಂತಹ ಸದ್ಯುಗ ಹಿಂದೆ ಯಾವಾಗಯಿತ್ತು ಎಂಬ ವಿಷಯವಾಗಿ ಮೊನ್ನೆ ಮೊನ್ನೆವರೆಗೆ ನನ್ನ ಮನಸ್ಸೂ ಯಾವ ತೀರ್ಮಾನಕ್ಕೆ ಬಂದಿರಲಿಲ್ಲ.

ನಾಲ್ಕೈದು ದಿನಗಳ ಹಿಂದೆ ಅಟ್ಟದಮೇಲೆ ಏನನ್ನೊ ಹುಡುಕುತ್ತಿದ್ದಾಗ ಹಳೆಯ ಪುಸ್ತಕಗಳ ಕಂತೆಯೊಂದು ಸಿಕ್ಕಿತು. ನಾನು ಮಾಧ್ಯಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಉಪಯೋಗಿಸಿದ ಪುಸ್ತಕಗಳು ಅವು. ಅಕ್ಕರೆಯಿಂದ ಹಳೆಯಪಳಕೆಯ ಹಾಳೆಗಳನ್ನು ತಿರುವಿಹಾಕಿದೆ. ವಿಧವಿಧವಾದ ಗುರುತುಗಳು ವಿಧವಿಧವಾದ ನೆನಪುಗಳನ್ನು ತಂದವು. ಇಲ್ಲೊಂದು ಶಾಯಿನ ಚಿತ್ತು, ಅಲ್ಲೊಂದು ಬೆಚ್ಚಿನ ಗುರುತು, ಇನ್ನೊಂದು ಕಡೆ ಪಠ್ಯಪುಸ್ತಕದ ಹಾಳೆಯ ಅಂಚಿನಲ್ಲಿ ಮೇಲಿನಿಂದ ಕೆಳಗಿನವರೆಗೂ ಗೆರೆ ಎಳೆದು, “ಶನಿವಾರದ ಹೊತ್ತಿಗೆ ಬಾಯಿಪಾಠ ಮಾಡಿಕೊಂಡು ಬಾ.” ಎಂದು ಆಜ್ಞೆಮಾಡಿಕೊಂಡು, ಜತೆಗೆ, “ದೊಡ್ಡರೋಗ ಬರ!” ಎಂದು ಹಾರೈಸಿದ್ದೆ. ಯಾರಿಗೆ ದೊಡ್ಡರೋಗ ಬರಬೇಕಾಗಿತ್ತೊ ಅದು ಈಗ ನೆನಪಿಲ್ಲ. ಇನ್ನೂ ಒಂದುಕಡೆ ಒಂದು ಸಣ್ಣ ಚಿತ್ರವನ್ನು ಬರೆದಿದ್ದೆ. ಅದನ್ನು ನೋಡಿದಾಗಲೆ ಕಿಟ್ಟಿ ಕಿಲಕಿಲನೆ ನಕ್ಕು ಕನ್ನಡ ಪಂಡಿತರ ಕೋಪದ ಪ್ರವಾಹವನ್ನು ನನ್ನ ಮೇಲೆ ಹರಿಸಿದ್ದು.


ಆ ಪುಸ್ತಕಗಳ ಮಧ್ಯೆ ನನ್ನ ಗಣಿತದ ಪುಸ್ತಕವೂ ಇತ್ತು. ಅದರ ಹಾಳೆಗಳನ್ನು ತಿರುವಿ ಹಾಕುತ್ತಿದ್ದಾಗಲೆ ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿತು. “ಒಬ್ಬ ಮನುಷ್ಯ ೨ ಆಣೆಗೆ ೩ ತೆಂಗಿನ ಕಾಯಿಯಂತೆ,” “ನನ್ನ ಹತ್ತಿರ ೨ ರೂ. ಇದೆ. ಅದರಲ್ಲಿ ಪೌಂಡು ಒಂದಕ್ಕೆ ೬ ಆಣೆಯಂತೆ ಅರ್ಧ ಪೌ. ಕಾಫಿ ಪುಡಿಯನ್ನೂ,” ಇತ್ಯಾದಿ ಇತ್ಯಾದಿ ಲೆಕ್ಕಗಳಿದ್ದುವು. ಇಂತಹ ಲೆಕ್ಕಗಳನ್ನು ನಾನು ಶಪಿಸುತ್ತಿದ್ದ ದಿನಗಳಿದ್ದುವಲ್ಲ, ಆ ಕಾಲವೆ ಒಳ್ಳೆಯ ಕಾಲ.

ಇಂದಿನ ಕಾಲದ ಗಣಿತದ ಪುಸ್ತಕಗಳ ಗತಿ ಏನು ಎಂದು ಕೆಲವುಸಲ ಎನ್ನಿಸುತ್ತದೆ. ನಾವು ಹುಡುಗರಾಗಿದ್ದಾಗ ಹೊಂದಿದ್ದ ತಾರ್ಕಿಕ ಜ್ಞಾನಕ್ಕಿಂತಲೂ ಹೆಚ್ಚಾಗಿ ಈಗಿನ ಕಾಲದ ಹುಡುಗರು ಪಡೆದಿದ್ದಾರೆ ಎಂಬುದು ನಿರ್ವಿವಾದ ವಿಚಾರ. ಆದ್ದರಿಂದ, “ಒಬ್ಬ ಮನುಷ್ಯ ರೂಪಾಯಿ ಒಂದಕ್ಕೆ ೬ ಕಾಸಿನಂತೆ ವರ್ಷ ಒಂದಕ್ಕೆ

೩೬ ರೂ. ೩ ಆ. ೬ ಕಾ. ವರಮಾನ ತೆರಿಗೆ ಕಟ್ಟಿದರೆ," ಅಥವ, "ಒಬ್ಬ ಕೆಲಸಗಾರ ದಿನವೊಂದಕ್ಕೆ ೧೦ ಅಡಿ ಉದ್ದ, ೧॥ ಅಡಿ ಅಗಲ, ೪ ಅಡಿ ಎತ್ತರದ ಗೋಡೆಯನ್ನು ಕಟ್ಟಿದರೆ, ೧೮ ಅಡಿ ಎತ್ತರ, ೧॥ ಅಡಿ ಅಗಲ, ೧೮೯೪ ಅಡಿ ಉದ್ದಳತೆ ಯುಳ್ಳ ಒಂದು ಮನೆಯನ್ನು ಕಟ್ಟುವುದಕ್ಕೆ ೬ ಕೆಲಸಗಾರರಿಗೆ ಎಷ್ಟು ದಿನಗಳು ಹಿಡಿಯುತ್ತದೆ?" ಇಂತಹ ಪ್ರಶ್ನೆಗಳನ್ನು ಈಗಿನಕಾಲದ ಹುಡುಗರಿಗೆ ಕೊಡುವುದರಲ್ಲಿ ಏನೇನೂ ಅರ್ಥವಿರಲಾರದು.

ಈಗಿನ ಗಣಿತ ಪುಸ್ತಕಗಳಲ್ಲಿನ ಲೆಕ್ಕಗಳು ಈ ಮಾದರಿಯವಿರಬಹುದು. "ನೀನು ಒಂದು ಮನೆಯನ್ನು ಕಟ್ಟಬೇಕಾಗಿದೆ. ಆದ್ದರಿಂದ ದಿನವೊಂದಕ್ಕೆ ೩ ಘಂಟೆ ಕೆಲಸಮಾಡಿ ೩ ದಿನದ ಕೆಲಸಕ್ಕೆ ೧೮ ರೂ. ನಂತೆ ಮಜೂರಿ ಸಂಪಾದಿಸುವ ಒಬ್ಬ ಕಾರ್ಮಿಕನ ಸಹಾಯವನ್ನು ಕೋರುತ್ತೀಯೆ. ಆತನು ಅಧಿಕವರ್ಷದ (leap year) ಜನವರಿ ೧ನೆ ತಾರೀಖು ಕೆಲಸ ಪ್ರಾರಂಭಿಸಿ ೩೩॥ ನಿಮಿಷಗಳು ಕೆಲಸ ಮಾಡಿದ ತರುವಾಯ ಮುಷ್ಕರ ಹೂಡುತ್ತಾನೆ, ಸೋದರಮಾವನಿಗೆ ಮದುವೆ ಪಾರಿತೋಷಕದ ಕಾರಣದಿಂದ ನಿನ್ನಿಂದ ೯೬ ರೂ. ಮಜೂರಿಯನ್ನು ಮುಂಗಡವಾಗಿ ತೆಗೆದುಕೊಂಡು ನಿನ್ನ ಮೇಲೆ ಶೇಕಡ ೧೪ ರಂತೆ ಬಡ್ಡಿ ಏರಿಸುತ್ತಾನೆ. ಅಲ್ಲಿಂದ ಮುಂದೆ ೩ ದಿನದ ಕೆಲಸಕ್ಕೆ ೧೭ ರೂ. ೧೨ ಆ. ಯಂತೆ ದಿನವೊಂದಕ್ಕೆ ೯೦ ನಿಮಿಷಗಳಕಾಲ ಏಪ್ರಿಲ್ ೨೨ನೇ ತಾರೀಖಿನವರೆಗೂ ಕೆಲಸ ಮಾಡುತ್ತಾನೆ. ಒಟ್ಟಿನಲ್ಲಿ ಅವನಿಗಾದ ನಷ್ಟವೇನು, ನಿನಗೆ ಬಂದ ಲಾಭವೇನು?"

—ಬೆ. ಚಂ.



ನರಕದ ಒಂದು ಸೀನ್

ಜರೀಪೇಟ, ಕಣ್ಣಿಗೆ ಕಪ್ಪುಕನ್ನಡಕ, ಕರೀ ಲಾಂಗ್ ಕೋಟು, ಕೊರಳಿಗೆ ವಲ್ಲಿ, ಕಚ್ಚಪಂಚೆ, ಗಿರಕಿ ಚಡಾವು ಕೈಯಲ್ಲಿ ಬೆತ್ತ ಈ ರೀತಿ ಅಲಂಕೃತನಾಗಿ ನರಕದ ಹೆಬ್ಬಾಗಲು ದಾಟಿ ಒಳಗಿನ ಅಂಗಳದಲ್ಲಿ ಕಾಲಿಟ್ಟ 'ಕಿಟ್ಟಿ' ಈ ಮೊದಲೇ ಅಲ್ಲಿಗೆ ಹೋಗಿ ಪೀಠವನ್ನಲಂಕರಿಸಿದ್ದ ಸಿಂಗಯ್ಯ ಕಿಟ್ಟಿಯನ್ನು ಕಂಡತಕ್ಷಣ ಗಹಗಹಿಸಿ ನಕ್ಕು ಸ್ವಾಗತಿಸಿದ. "ಮಗನೇ ಕಡೆಗೂ ಬಂದೆಯಾ? ನಿನ್ನದೇ ಆದಸ್ಥಾನಕ್ಕೆ!"

ಕಿಟ್ಟಿ "ಯಾರ್ರೀ ನೀವು? ಏನದು ನಗುತ್ತೀರ. ಮರ್ಯಾದೆ ಬೇಡವೇ?"

"ಎಲವೋ ತಕ್ಕಡಿ; ನಾನು ಯಾರು ಎಂದು ಕೇಳುತ್ತೀಯ? ತಿಳಿಯಲಿಲ್ಲವೇ? ಕಪ್ಪು ಕನ್ನಡಕ ತೆಗೆ ಕಾಣುತ್ತೆ. ಅಂದು ಸಾಹಿತ್ಯಶ್ರೇಷ್ಠ ಗುಂಡಯ್ಯನ ಭಾಷಣ ವಾದಮೇಲೆ ನೀನು ತಾನೆ ವಂದನಾರ್ಪಣೆ ಮಾಡುವುದಕ್ಕೆ ಎದ್ದವನು ಆಗೇನಾಯ್ತು ಜ್ಞಾಪಿಸಿಕೊ."

"ಓ ನೀನೊ! ಚಂಡಾಳ. ಕೊಲೆಗಾರ! ಅವತ್ತು ನನ್ನ ಕುತ್ತಿಗೆ ಹಿಸುಕಿದವ ನೀನೇತಾನೆ?"

"ನಾನೇ, ನಾನೆ! ನಾನೊಬ್ಬನೇ ಏಕೆ? ಇಡೀ ಸಭೆಯೇ ಆವತ್ತು ನಿನ್ನ ಕುತ್ತಿಗೆ ಹಿಚುಕಲು ತಯಾರಾಗಿ ಕುಳಿತಿತ್ತು. ಗುಜು ಗುಜು ಮಾತಾಡುತ್ತಿದ್ದರು. ಆದರೆ ಎಲ್ಲರೂ ಒಟ್ಟಿಗೆ ಎದ್ದರೆ ನೀನು ತಪ್ಪಿಸಿಕೊಂಡು ಅವರೇ ಹೊಡದಾಡಿಯಾ ರೆಂಬ ಭಯದಿಂದ ನನ್ನೊಬ್ಬನಿಗೆ ಆ ಕೆಲಸ ನೇಮಿಸಿದರು ಅನ್ಯಾಯವಾಗಿ ನೀತಪ್ಪಿ ಸಿಕೊಂಡೆ. ಆ ಪಾಪಿ ರಾಮಕೃಷ್ಣಯ್ಯಂಗಾರಿ ಬಂದು ಬಿಡಿಸಿಬಿಟ್ಟ. ಇಲ್ಲದಿದ್ದರೆ ನನಗಿಂತ ಮುಂಚೆಯೇ ನೀನು ಇಲ್ಲಿ ಸ್ಥಾನವನ್ನಲಂಕರಿಸುತ್ತಿದ್ದೆ"

"ಆದರೂ ಪರಮಪಾಪಿ ನೀನು. ನನ್ನಂಥ ಯಾರಿಗೂ ಹಿಂಸೆ ಕೊಡದೆ ಇರುವ ಏನೋ ಕೈಲಾದ ಸೇವೆಮಾಡಿ ಕೊಂಡಿರುವವನ ಮೇಲೆ ಹೇಗೆ ಕೈಮಾಡಿದೆಯೋ?"

"ಏನು? ಯಾರಿಗೂ ಹಿಂಸೆ ಕೊಟ್ಟಿಲ್ಲವೆ? ಎಲಾ ಗುಳ್ಳ! ಭೂಷಣವಾಗಿ ಬಟ್ಟೆ ಹಾಕಿಕೊಂಡಾಕ್ಷಣ ನೀ ದೊಡ್ಡವನಾದೆಯೇನೋ? ಸುಳ್ಳುಹೇಳಲು ಏನು ಪರ್ಮಿಟ್ಟು ಸಿಕ್ಕಂತೆಯೊ? ಅಥವಾ ನೀನೇನಾದರೂ ರಾಜಕೀಯ ಮುಖಂಡನೋ? ಇರಲಿ.

ಹಿಂಸೆ ಕೊಟ್ಟಿಲ್ಲವೆ ನೀನು. ಯಾವಭಾಷಣ ಆಗಲಿ, ಯಾವಸಭೆ ಆಗಲಿ, ಅದೆಲ್ಲಿಂದ ಬರುತ್ತಿದ್ದೆಯೋ, ನರಮಾಂಸ ಭಕ್ಷಕನಹಾಗೆ, 'ದುಡುಂ' ಎಂದು ಇಳಿದು, ನಿನ್ನ ವಂದನಾರ್ಪಣಾ ಭಾಷಣದಿಂದ. ನಮ್ಮಂಥ ಶ್ರೋತೃಗಳ ನರ ನರಗಳನ್ನೆಲ್ಲ ಕತ್ತರಿಸಿ, ನಮ್ಮ ಮೈಮೇಲೆಲ್ಲಾ 'ಬೋರ್‌ವೆಲ್' ಭಾವಿತೋಡಿ ಜೀವಶ್ರವಗಳನ್ನು ಮಾಡುತ್ತಿದ್ದೆಯಲ್ಲ ನಮ್ಮನ್ನು ! ಪಾಪ ಆ ಭಾಷಣಕಾರರ ಭಾಷಣವನ್ನು ದೀವಾಳಿ ಮಾಡುತ್ತಿದ್ದೆ. ಅವರು ಆಡಿದ ಮಾತನ್ನೆ ಪುನಃ ಅಗಿದು ನುಂಗಿ ಅದನ್ನೇ ಕೊಲೆ ಮಾಡಿ, ಆಡಿ ಜನರನ್ನು ರೊಚ್ಚಿಗೊಳಿಸುತ್ತಿದ್ದೆಯಲ್ಲ ಇದಕ್ಕಿಂತ ಪ್ರಾಣಿಹಿಂಸೆ ಬೇಕೆ? ಆ ಮೊದಲೇ ನಿನ್ನ ಕೊಲೆ ಆಗದಿದ್ದುದು ನಿನ್ನ! ಪೂರ್ವಜದ ಪುಣ್ಯ...."

"ನಾನೇನು ಮಾಡಲೋ ಅದಕ್ಕೆ? ನಾನು ಬೇಡಎಂದರೂ ಆ ಕಾರ್ಯದರ್ಶಿ ನನ್ನನ್ನು ಎಳೆತಂದು ಪ್ರಾಣ ಹಿಂಡುತ್ತಿದ್ದ"—

"ಮಹಾ ದೊಡ್ಡಮನುಷ್ಯನ ಹಾಗೆ ಮುಂದೆಯೇ ಜರಿಪೇಟಹಾಕಿ ಕುಳಿತಿರುತ್ತಿದ್ದೆಯಲ್ಲ. ಕರೆಯಲಿ ಎಂದು. -ಯಾವ ಸಭೆಗಾದರೂ ಮುಂದೇ ಹಾಜರು ಮಗ. ಇವನಿಲ್ಲದಿದ್ದರೆ ಸಭೆಯೇ ನಡೆಯುವುದಿಲ್ಲವೋ ಅನ್ನುವ ಹಾಗೆ...."

"ನನ್ನದಿರಲೊ. ನಿಮ್ಮ ಅಧ್ಯಕ್ಷರುಗಳ ಯೋಗ್ಯತೆಯೇನೋ. ಅವರಿಗೆ ಮಾತನಾಡಲು ಬರದೆ ತಾನೆ ನನ್ನ ಕಾಲು ಬೀಳುತ್ತಿದ್ದದು. ಹಿಂದಿನ ಎರಡು ಸಭೆ ಆದಾಗ ನೀನಿರಲಿಲ್ಲವೇ! ಫಾರೆಸ್ಟ್ ಆಫೀಸರನ್ನು ಅಧ್ಯಕ್ಷರು ಮಾಡಿ ವಸಂತ ಸಾಹಿತ್ಯೋತ್ಸವ ಏರ್ಪಡಿಸಿದಾಗ ಒಂದು ಗಂಟೆ 'ಹುಲಿಯ ಚರ್ಮ', 'ಆನೆಯ ಚರ್ಮ' ಇತ್ಯಾದಿ ವಿಚಾರ ಭಾಷಣ ಕೊರೆಯಲಿಲ್ಲವೆ? ನನಗಿಂತ ಅವರ್ರೆಲ್ಲ ಏನು ಕಡಿಮೆ ?"

"ಇದೊಂದು ವಿಚಾರದಲ್ಲಿ ನಿನ್ನ ಮಾತಿಗೆ ಒಪ್ಪುತ್ತೇನೆ. ನಿನಗಿಂತ ಅಧ್ಯಕ್ಷರುಗಳು ಕಡಮೆಯೇನಿಲ್ಲ. ನೀ ಮಾಡುತ್ತಿದ್ದ ಕೆಲಸ ಅವರು ಮಾಡುತ್ತಿದ್ದರು. ಮಾಡಲಾರದ ಮುರ್ಖಾಳರು ನಿನಗೆ ಆ ಪಟ್ಟ ಕೊಡುತ್ತಿದ್ದರು. ಅವರು ಒದುಕಿ ನಿನ್ನನ್ನೂ ತೆಗೆದರು ಅಷ್ಟೆ.—ಅದಿರಲಿ. ಇಲ್ಲಿಗೆ ಹೇಗೆ ಬಂದೆ ನೀನು?

"ಅವನಿದ್ದಾನಲ್ಲ ರಾಮಕೃಷ್ಣ ಅಯ್ಯಂಗಾರಿ...."

"ಯಾರು? ನಿನ್ನನ್ನು ಅವತ್ತು ಬಿಡಿಸಿದನಲ್ಲ ಅವನೇ?"


"ಹೌದು. ಅವನೇ ಚಾಂಡಾಳ. ಮೊನ್ನೆ 'ಗೋ....ರಾ....' ಇವರ ಭಾಷಣ ಇತ್ತು. ನಮ್ಮ ಅಸೆಂಬ್ಲಿ ಸದಸ್ಯರು ಶ್ರೀ "ತಿಮ್ಮಪ್ಪನಹಳ್ಳಿ"ಯವರು ಅಧ್ಯಕ್ಷರು. ಅವರು ಒಂದು ಗಂಟೆ ಅಧ್ಯಕ್ಷಭಾಷಣ ಆದಮೇಲೆ ವಂದನಾರ್ಪಣೆಗೆ ನನ್ನನ್ನೂ ಕರೆದರು. ನಾನು ನಿಂತು ಹತ್ತನಿಮಿಷವೂ ಮಾತನಾಡಿರಲಿಲ್ಲ. ನಾನೇನೂ ಹೆಚ್ಚು ಮಾತನಾಡಿರಲಿಲ್ಲ ಅವತ್ತು. ಕೇವಲ ಅಧ್ಯಕ್ಷರ ಗುಣಗಾನ ಮಾಡುತ್ತಿದ್ದೆ. ಅವರು ಅಸೆಂಬ್ಲಿಯಲ್ಲಿ ಸೇವೆ ಸಲ್ಲಿಸಿದ್ದು, ಪಾರ್ಲಿಮೆಂಟನಲ್ಲಿ ಮಾಡಿದಂಥ ಅಮೋಘ ಕಾರ್ಯಗಳು·

ಇತ್ಯಾದಿ ವಿಚಾರದಲ್ಲಿ ಇನ್ನೂ ಪ್ರಾರಂಭದೆಸೆಯಲ್ಲಿ ಇದ್ದೆ. ಅಷ್ಟರಲ್ಲಿ ಆ ಪ್ರಾಣಿ ತಕ್ಷಣ ಹಾರಿಬಂದು ಎದೆಗೆ ಚೂರಿಹಾಕಿದ. 'ಶಿವವೇ' ಎಂದು ಕೆಳಗೆ ಬಿದ್ದೆ......."

"ಮಹಾತ್ಮಾ ಗಾಂಧೀಯಂತೆ ಅಮರನಾದೆಬಿಡು ನೀನು."

ಮಾತು ಹೀಗೆ ನಡೆದಿರುವಷ್ಟರಲ್ಲಿ ಹೊಸಬನೊಬ್ಬ ನರಕದ ಹೆಬ್ಬಾಗಿಲನ್ನು ದಾಟಿ ಒಳಗೆ ಕಾಲಿಟ್ಟ. "ನನ್ನನ್ನು ಗುರುತಿಸಿದ" ನೀ ಬಿಟ್ಟ ಕೆಲಸ ನಾ ಮಾಡಿದ್ದೇನೆ ಮಗೂ. ಇನ್ನು ಯಾವ ಚಾಂಡಾಲ, ನಮ್ಮ ಬಂಧುಗಳನ್ನು ಹಿಂಸಿಸುತ್ತಾನೆ ನೋಡೋಣ" ಎಂದುಕೊಂಡು ಬಂದು ನನ್ನ ಬಳಿ ಕುಳಿತ.

—ಹಾರ್ನಳ್ಳಿ.



ಉತ್ತರದ ಪೌರುಷ

ಜಯಂತ್ ದೇಸಾಯಿ ಇಷ್ಟರಲ್ಲೇ ಭಗವಾನ್ ಬುದ್ಧನ ದಿವ್ಯ ಚರಿತ್ರೆಯನ್ನು ರಜತಪರದೆಯಮೇಲೆ ಇಳಿಸುತ್ತಾರೆ, ಎಂಬುದು ನಿಜವೆ? (ಕುಮಾರಿ ಕೋಮಲ, ಮಡಿಕೇರಿ) ಹೌದು, ಇಳಿಸುತ್ತಾರೆ.

ಬಸ್ಸುಗಳಲ್ಲಿ, ಅದರಲ್ಲೂ ಸರ್ಕಾರಿ ಬಸ್ಸುಗಳಲ್ಲಿ, ಕುರಿಗಳನ್ನು ಕೂರಿಸಿ ಸಾಗಿಸ ಬಹುದೆ? (ಪುಟ್ಟರಾಮು, ಚಳ್ಳಕೆರೆ) ಮತ್ತೆ? ಅವು ಖಾಲಿ ತಿರುಗಾಡಬೇಕೇನು?

ಅಶ್ಲೀಲ ಸನ್ನಿವೇಶಗಳನ್ನು ವಿವರಿಸಿರುವ ಹಲವು ಕಾದಂಬರಿಗಳನ್ನು ವಿದ್ಯಾರ್ಥಿ ಗಳು ಓದುತ್ತಿರುವುದನ್ನು ನಾವು ನಿಲ್ಲಿಸಬೇಡವೆ? (ಶ್ರೀ ಎಂ.ಸಿ.ಎಂ) ಶ್! ಸುಮ್ಮನಿರಿ! ಕೂಡದು ಎಂದು ನಾವು ವಿರೋಧಿಸಿದರೆ, ಆ ಬರಹಗಾರರು ಇನ್ನೂ ಹೊಲಸುಕಸಬು ಯಾವುದನ್ನಾದರೂ ಹಿಡಿದಾರು

ವಿವಾಹ ಮಾಡಿಕೊಳ್ಳಬೇಕೆಂದಿರುವ ನನ್ನಂಥ ನವಯುಗದ ವೀರ ತರುಣನಿಗೆ ನಿಮ್ಮ ಉಪದೇಶವೇನಾದರೂ ಇದೆಯೆ? ಇದ್ದರೆ ತಿಳಿಸಿ (ಕುಮಾರ ಕರಿಯಪ್ಪ, ಭದ್ರಾ ವತಿ) ಇದೆ; ಭದ್ರಾ! ಭದ್ರಾ!

ಷಿನ್‌ಷಿನಾಕಿ–ಬೂಬ್ಲಾ–ಬೂ ಆದಮೇಲೆ, ಇನ್ನು ಯಾವ ಚಿತ್ರ ತಯಾರಾಗಿ ಹೊರಬರುತ್ತದೆ, ಬಲ್ಲಿರಾ? (ಶ್ರೀ ಎಲ್.ಎಸ್.ವಿ. ಬೆಂಗಳೂರು) "ಯಸ್ಯಜ್ಞಾನ ದಯಾಸಿಂಧೋರಗಾಧಸ್ಯಾನಘಾಗುಣಾಃ" ಬರುತ್ತದೆ.

ವಾರ ಭವಿಷ್ಯ ಪಠಿಸುವುದರಿಂದ ಅನುಕೂಲಗಳೇನಾದರೂ ಉಂಟೆ? (ದಿ. ಶ್ರೀ ಹುಬ್ಬಳ್ಳಿ) ಅದನ್ನು ತಯಾರಿಸಿ ಪ್ರಕಟಿಸುವವರಿಗೆ ಖಂಡಿತ ಉಂಟು.

ಈ ವರ್ಷದ ಲಗ್ನಗಳೆಲ್ಲವೂ ಮುಗಿದುವು; ನನಗಿನ್ನೂ ಮದುವೆಯಾಗಲಿಲ್ಲ; ಇದಕ್ಕೆ ಕಾರಣವೇನು? (ತಾ.ವೆಂ.ಸು. ತರೀಕೆರೆ)....ಸಿನಿಮ ತಾರೆಯರನ್ನೇ ವಿವಾಹ ವಾಗ ಬೇಕೆಂಬ ನಿಮ್ಮ ಹಂಬಲವನ್ನು ನೀವು ಬಿಡಬೇಕು. ಸಿನಿಮ ತಾರೆಯರೂ ಕೂಡ, ಸಿನಿಮ ತಾರೆಯರ ಹಾಗಿಲ್ಲ, ಎಂಬುದನ್ನು ನೀವು ಮನಗಾಣಬೇಕು.

ಸ್ತ್ರೀ ವಸ್ತ್ರಾಪಹಾರಕ್ಕಾಗಿ ಧಾಳಿನಡೆಸಿದ ಅಮೇರಿಕನ್ ವಿಶ್ವವಿದ್ಯಾಲಯವೊಂದರ ವಿದ್ಯಾರ್ಥಿಗಳ ನಡತೆಗಾಗಿ, ಸ್ಥಾನಪತಿಗಳು ತಲೆ ತಗ್ಗಿಸಿದರೆಂತಲ್ಲಾ. ಅಷ್ಟು ಸಾಕೆ? ಸ್ಥಾನಪತಿಗಳು ಏನು ಮಾಡಬೇಕಾಯಿತು, ಎಂದು ಹೇಳುವಿರಾ? (ಶ್ರೀ ಎಸ್.ಟಿ. ಶಾಸ್ತ್ರಿ, ಬೆಂಗಳೂರು) ಕಣ್ಣು ಮುಚ್ಚಬೇಕಾಯಿತು.

ಡೆನ್‌ಮಾರ್ಕ್ ಅಮೇರಿಕಾದಲ್ಲಿದೆ ಎಂದು ಒಬ್ಬ ಹೈಸ್ಕೂಲ್ ವಿದ್ಯಾರ್ಥಿ ಹೇಳಿದನ್ನು ಕೇಳಿಯೂ ನೀವು ನಮ್ಮ ವಿದ್ಯಾಭ್ಯಾಸ ಮಟ್ಟವನ್ನು ಮೆಚ್ಚುವಿರಾ? (ಕುಮಾರ ತಮ್ಮಣ್ಣ, ಮೈಸೂರು) ಆ ಉತ್ತರವನ್ನು ಕೇಳಿದ್ದರಿಂದಲೇ, ವಿದ್ಯಾಭ್ಯಾಸ ಮಟ್ಟ ಉತ್ತಮ ಎಂದು ಮನಗಂಡೆ. ಎಸ್.ಎ.ಟಿ. ಓಗೆ ಸೇರಿದಾಗಿನಿಂದ, ಡೆನ್‌ಮಾರ್ಕ್ ಅಮೇರಿಕಾದಲ್ಲಿದ್ದಂತೆಯೇ ಸರಿ.

ಭಾರತದಲ್ಲಿ ತಯಾರಾಗುತ್ತಿರುವ ವಾಕ್ಚಿತ್ರಗಳು ಇಷ್ಟು ಹೊಲಸಾಗಲು ಕಾರಣವೇನು? (ಶ್ರೀ ಎಂ.ಡಿ. ಸರಸ್ವತೀಪುರ.) ಅವು ಅಮೇರಿಕನ್ ಚಿತ್ರಗಳನ್ನು ಅನುಕರಿಸಲು ಪ್ರಯತ್ನಿಸುವುದರಿಂದ.

ನಮ್ಮ ಪಕ್ಕದ ಮನೆಯಿಂದ ದಿನವೂ ಒಂದೆರಡು ಗಂಟೆಗಳಕಾಲ ಅಸಹ್ಯಧ್ವನಿ ಹೊರಬಂದು ನಮ್ಮ ನೆಮ್ಮದಿಯನ್ನು ಕೆಡಿಸುತ್ತದೆ; ಇದಕ್ಕೆ ಪರಿಹಾರವೇನು? (ಶ್ರೀ ಸಾಂಬಶಿವ, ಮದನಪಲ್ಲಿ) ಆ ಹಾರ್ಮೋನಿಯಮ್ಮನ್ನು ನೀವೇ ಕೊಂಡು ಕೊಂಡುಬಿಡಿ. ನಂತರ, ಅವರು, ಇದೇ ರೀತಿ ನಮಗೆ ಬರೆಯುತ್ತಾರೆ.

(ಸಶೇಷ) —ಸಾ. ಕ.

—o—

ಒಲ್ಲೆನಾದರು ಇಲ್ಲ, ಬಲ್ಲೆನು,
ಬಹುದು, ಕೊಡದು, ಹೂಂ ಎನೆ,
ಊಹುಂ, ಆಗದು, ಬಾರದು,
ತಗುಮೆ, ತಗುವುದು, ಬಹುಶಃ

ಹೆಂಗೊ ಮಾಳ್ಪೆ, ನಾ ಕಾಣೆಪ,
ಅಲ್ಲ, ಉಂಟೋ, ಇದ್ದಿತು,
ಹೀಂಗೆ ಹೇಳುವ ಜಾಣ, ಪ
ರಂತು ಎನ್ನುವ ನಾಣದೆ.

ಕಾಳಿಂಗ ಮರ್ಧನ

ಒಲಂಪಿಕ್ ಪಂದ್ಯಕ್ಕೆ ಹೆಲ್‌ಸಿಂಕಿಗೆ ನನ್ನನ್ನು ಕಳುಹಿಸುತ್ತಾರೋ ಏನೋ? ಮೊನ್ನೆ, ನಿಂತ ನಿಲುವಿನಿಂದಲೇ ಹದಿನೈದೂವರೆಅಡಿ ಹಾರಿದೆ. ಶಂಕರು ಒಬ್ಬನೆ ಜೊತೆಯಲ್ಲಿದ್ದದ್ದು.

ನಾನೂ ಅವನೂ ರಾತ್ರಿ ೧೦ ಗಂಟೆ, ಬಸ್ ಸಿಕ್ಕದೆ, ಆಸ್ಪತ್ರೆ ಕಡೆಯ ಕಾಲು ದಾರಿಯಲ್ಲಿ ಹೋಗುತ್ತಿದ್ದೆವು. ಕಾಲುಕೆಳಗೆ ಏನೋ ಹರಿದುಬಂದಂತಾಯಿತು. ನೆಗೆದೆ ಮೇಲಕ್ಕೆ! ಮಾರ್ಕೆಟ್ ಪ್ರದೇಶವೆಲ್ಲದರ ಪಕ್ಷಿದರ್ಶನವಾಯಿತು. ಕೆಳಕ್ಕೆ ಇಳಿದೆ; ಸುಮಾರು ೧೮, ಬೇಡ, ೧೬, ಬೇಡ, ೧೫ವೊರೆ ಅಡಿಯಾಚೆ.


ಶಂಕರು, ಕಿಲಕಿಲ ನಗುತಿದ್ದ, "ಕಾಳಿಂಗಸರ್ಪ, ಕಣೋ" ಅಂದೆ. ಕಣ್ಣೊರಸಿಕೊಳ್ಳುತ್ತ ಶಂಕರು ಹೇಳಿದ, "ಹಾವಲ್ಲಯ್ಯ, ಅದು; ಮುಂಗಸೀ!"


ದಾರಿಉದ್ದಕ್ಕೂ ಅದೇ ಚರ್ಚೆ. ನಾನು ಹಾವು, ಎಂದರೆ, ಅವನು ಹಲ್ಲಿ ಅಂದ. ನಾನು ಆರಡಿ ಎಂದರೆ, ಅವನು ಮುಕ್ಕಾಲುಗೋಣು, ಅಂದ. ಮನೆಗೆ ಹೋದೆವು. ನಾವೂ ಅಣ್ಣಯ್ಯ ಎಲ್ಲರೂ ಊಟಕ್ಕೆ ಕುಳಿತೆವು. ಆಗ ಕಾಳಿಂಗದ ವಿಷಯ ಹೇಳಿದೆ.

"ಛೆ! ಬೆಂಗಳೂರಲ್ಲಿ ಕಾಳಿಂಗಸರ್ಪ ಇಲ್ಲವೇ ಇಲ್ಲ....ಅದಿರೋದು ಆಗುಂಬೆ ಕಡೆ" ಅಂದರು, ಅಣ್ಣಯ್ಯ. "ಅದೂ ಅಲ್ಲದೆ, ಕಾಳಿಂಗಸರ್ಪವಾಗಿದ್ದರೆ, ನೀನೆಲ್ಲಿಗೆ ಹೋದರೂ ರಾಮಬಾಣದಹಾಗೆ ನಿನ್ನ ಬೆನ್ನುಹತ್ತಿ, ಹೊಡೆದೇ ಬಿಟ್ಟರೋದು!" "ಕಾಳಿಂಗ ಅಂದರೆ, ನಾನೊಂದು ಸಾರಿ ಶಿಕಾರಿಪುರದಲ್ಲಿ ಸಾಯಿಸಿದೆನಲ್ಲಾ, ಅದು! ಕೆರೆ ಏರಿಮೇಲೆ ಬರುತ್ತಾ ಇದ್ದೆ, ಶನಿವಾರ, ಅಮಾವಾಸ್ಯೆ, ಒಂಬತ್ತುಗಂಟೆ...." ಹುಲ್ಲಿನ ಪೊದೆಯಲ್ಲಿ ಏನೋ ಸದ್ದಾಯಿತು. ಕೋಲು ತೆಗೆದು ಹುಲ್ಲನ್ನು ಹೊಡೆದೆ. ಈಚೆಗೆ ಬಂತು. ಬಿಟ್ಟೆ, ಬಾಲದಮೇಲೆ ಸರಿಯಾಗಿ ಒಂದೇಟು. ತಪ್ಪಿಸಿಕೊಂಡು, ಬಲಗಡೆಗೆ ಬಂತು. ಭಾರಿ ಕಲ್ಲೊಂದನ್ನು ಆಸ್ತೀಕ ಅಂತ....ಹಾಕಿದೆ ಬೆನ್ನಮೇಲೆ. ಬಿಲಿಬಿಲಿ ಅಂತ ಒದ್ದಾಡಿತು. ನಾಗಲೋಕ ಸೇರಿತು....ಅದು, ನಿಜವಾದಕಾಳಿಂಗ" ಅಂದರು.

"ಶಿಕಾರಿಪುರದಲ್ಲಿ ಕಾಳಿಂಗಸರ್ಪ ಹೇಗೆ ಬಂತು? ಅದಿರೋದು ಆಗುಂಬೆ ಕಡೆ....ಅಲ್ಲದೆ, ಅದು ಕಾಳಿಂಗವಾಗಿದ್ದರೆ, ರಾಮಬಾಣದಹಾಗೆ ನೀವೆಲ್ಲಿಗೆ ಹೋದರೂ ಬಿಡೋದಿಲ್ಲ; ಸತ್ತರೂ ಅದು ಬಿಡೋದಿಲ್ಲ ನಿಮ್ಮನ್ನ...."ಅಂದೆ ನಾನು. ಅಣ್ಣಯ್ಯನವರು ಏಕೋ, ಮಜ್ಜಿಗೆ ಅನ್ನ ಊಟಮಾಡದೆಯೆ, ಕೈ ತೊಳೆದುಕೊಳ್ಳುವುದಕ್ಕೆ ಎದ್ದುಬಿಟ್ಟರು.

—ಪಾಟಾಳಿ.


ರುಚಿಯಾದ
ನರ್ಗಿಸಿ
ಕಬಾಬ್
ಈ ರೀತಿ
ಸುಲಭವಾಗಿ ಮಾಡಬಹುದು:
1 ಕಪ್ ಕಡಲೆಬೇಳೆಯನ್ನು ರಾತ್ರಿಯೆಲ್ಲಾ ನೆನೆ ಹಾಕಿರಿ ಕಡಲೆಬೇಳೆ, 1 ಪೌಂಡು ಸಣ್ಣಚೂರುಗಳಾಗಿ ಕತ್ತರಿಸಿದ ಮಾಂಸ, ಹಸಿಮೆಣಸಿನಕಾಯಿಗಳು, ಸ್ವಲ್ಪ ಒಣಮೆಣಸುಗಳು, ಕೊಂಚ ಅರಿಸಿಣ ಪುಡಿ, ಮೆಣಸಿನಕಾಯಿಪುಡಿ, ಜೀರಿಗೆ, ದಾಲ್ಚಿನ್ನಿ, ಲವಂಗಗಳು, ಉಪ್ಪು ಇವುಗಳನ್ನೆಲ್ಲಾ ಕಲಸಿ ಚನ್ನಾಗಿ ರುಬ್ಬಿರಿ ಚನ್ನಾಗಿ ಬೇಯಿಸಿದ ಮೊಟ್ಟೆಗಳಿಗೆ ಒದ್ದೆಯಾದ ಬೆರಳುಗಳಿಂದ ರುಬ್ಬಿದ ಮಸಾಲೆಯನ್ನು ಹಚ್ಚಿರಿ ಕಬಾಬುಗಳಂತೆ ಡಾಲ್ಡದಲ್ಲಿ ಕರಿಯಿರಿ ಹೆಚ್ಚಿದ ಈರುಳ್ಳಿಗಳ ಜೊತೆಗೆ ಬಡಿಸಿರಿ
ಇದನ್ನು ಕೊಳ್ಳಲು ಮರೆಯಬೇಡಿರಿ!
ಹೊಸ ಡಾಲ್ಡ ಪಾಕ ಪುಸ್ತಕ, ಇಂಗ್ಲೀಷಿನಲ್ಲಿ — ಚಿತ್ರಗಳ ಸಹಿತ — ಆರ್ಟ್ ಪೇಪರು — 80 ಪುಟಗಳು — 300 ಪಾಕ ವಿಧಾನಗಳು — ಆರೋಗ್ಯ, ಶುಚಿತ್ವ, ಅಡಿಗೆಮನೆ ವಿಷಯಗಳ ಮೇಲೆ ಸೂಚನೆಗಳು — ಬೆಲೆ ರು 1 ಮಾತ್ರ ಮತ್ತು 8 ಆಣೆ ಟಪಾಲು ಚಾರ್ಜು
ದಿ ಡಾಲ್ಡ ಅಡ್ವೈಸರಿ ಸರ್ವಿಸ್
ಪೋಸ್ಟ್ ಬಾಕ್ಸ್ ನಂ 353, ಬೊಂಬಾಯಿ 1
ಡಾಲ್ಡದಲ್ಲಿ
ಮಾಡಿದ್ದು
ಅತ್ಯುತ್ತಮವಾದ ರುಚಿಗಾಗಿ ನಿಮ್ಮ ಖಾರ, ಸಿಹಿ ಮತ್ತು ಇತರ ತಯಾರಿಕೆಗಳನ್ನು ಡಾಲ್ಡದಲ್ಲಿ ತಯಾರಿಸಿರಿ. ಡಾಲ್ಡ ಶುದ್ಧವಾದದ್ದು ಮತ್ತು ಪೌಷ್ಟಿಕರವಾದದ್ದು. ಅದು ಸೀಲ್ ಮಾಡಿದ ಡಬ್ಬಗಳಲ್ಲಿ ನಿಮಗೆ ಹಸನಾಗಿ ಮತ್ತು ಸ್ವಚ್ಛವಾಗಿ ದೊರೆಯುತ್ತದೆ.
DALDA
HYDROGENATED GROUNDNUT AND TIL OIL
डालडा
ಸಮತೂಕಾಹಾರದಲ್ಲಿ ನಿಮಗೆ ಬೇಕಾದ ಕೊಬ್ಬನ್ನು ಒದಗಿಸುತ್ತದೆ


ಪ್ರತಿಕೆಲಸಕ್ಕೂ ಪ್ರತ್ಯೇಕವಾದ
ಷಾಲಿಮಾರ್ ಪೆಯಿಂಟ್
ಇದೆ
ಜಾಣರು ಷಾಲಿಮಾರ್ ಪೆಯಿಂಟನ್ನೇ
ಉಪಯೋಗಿಸುತ್ತಾರೆ
SPX 93A-KN
SHALIMAR PAINT
SHALIMAR PAINT, COLOUR & VARNISH CO., LTD.
POST BOX 136, MADRAS 1

"ಲಕ್ಸ್ ಟಾಯಿಲೆಟ್ ಸೋಪು
ನನ್ನ ಚರ್ಮವನ್ನು ಸುಂದರವಾಗಿಡುತ್ತದೆ"
ಎಂದು ಎ ಆರ್. ಶಕುಂತಲ
ಹೇಳುತ್ತಾಳೆ



ಬೆಳ್ಳಗಿರುವ ಶುದ್ಧವಾದ
ಮತ್ತು ಸುಂದರವಾದ
ಸುವಾಸನೆಯುಳ್ಳ ಈ
ಸೋಪು ನಿಮ್ಮ ಚರ್ಮವನ್ನು
ಕೂಡಾ ಸುಂದರವಾಗಿಡಲಿ!



ಸಿನೆಮ ತಾರೆಯರ ಸೌಂದರ್ಯದ ಸೋಪು

LTS. 332-50 KN